# ಬೃಹಚ್ಚರಣ

ಸಂಘದ ತ್ರೈಮಾಸಿಕ ವಾರ್ತಾ ಪತ್ರಿಕೆ

ಸಂಪುಟ : 10 ಸಂಚಿಕೆ : 1 ಖಾಸಗಿ ಪ್ರಸಾರಕ್ಕಾಗಿ ಜನವರಿ–ಜೂನ್ 2020


**ಸಂಘದ ಸದಸ್ಯರಾಗಿ**

| | |
|---|---|
| ಮಹಾ ಪೋಷಕರು | – ₹ 25,000/– |
| ಪೋಷಕರು | – ₹ 5,000/– |
| ಸದಸ್ಯತ್ವ | – ₹ 1,000/– |
| ವಾರ್ಷಿಕ ನಿರ್ವಹಣೆ | – ₹ 500/– |


## ಶ್ರೀ ಸುಬ್ರಹ್ಮಣ್ಯೇಶ್ವರ ದೇವರ ನಾಗಾರಾಧನೆ ವಿಶೇಷಾಂಕ



### ಸಂಪಾದಕೀಯ

ಮಾನ್ಯರೇ, ಶಾರ್ವರಿ ನಾಮ ಸಂವತ್ಸರವು ಸಮುದಾಯದ ಕುಟುಂಬ ಸದಸ್ಯರಿಗೆಲ್ಲಾ ಶುಭ ತರಲಿ.

'ಬೃಹಚ್ಚರಣ' ವಾರ್ತಾ ಪತ್ರಿಕೆಯ ಬಗ್ಗೆ ತಮ್ಮ ಮೆಚ್ಚುಗೆ, ಅನಿಸಿಕೆಗಳಿಗೆ ಸಂಪಾದಕ ಮಂಡಳಿ ಪರವಾಗಿ ವಂದನೆಗಳು. ತಮ್ಮ ಅಭಿಪ್ರಾಯ, ಸಲಹೆ, ಸೂಚನೆಗೆ ಸದಾ ಸ್ವಾಗತ. ನಮಸ್ಕಾರ.




9845113475
mmdbs.mag@gmail.com

**ಕೆ.ಸಿ. ನಟರಾಜ್**
ಸಂಪಾದಕ


ನಮಸ್ಕಾರ, ನೂತನ ಶಾರ್ವರಿ ನಾಮ ಸಂವತ್ಸರವು ತಮ್ಮೆಲ್ಲರಿಗೂ ಶುಭವಾಗಲೆಂದು ಹಾರೈಸುತ್ತೇನೆ.

ಸಂಘದ ಕಾರ್ಯಚಟುವಟಿಕೆಗಳಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕಾರ ನೀಡುತ್ತಿರುವ ನಿಮ್ಮೆಲ್ಲರಿಗೂ ವಂದನೆಗಳು.



**ಎಸ್.ಸಿ. ಶ್ರೀನಿವಾಸ್**
ಕಾರ್ಯದರ್ಶಿ

### ಅಧ್ಯಕ್ಷರ ನುಡಿ

ಬಂಧುಮಿತ್ರರೇ, ಆದರಪೂರ್ವಕ ನಮಸ್ಕಾರಗಳು.

ನಿಮೆಲ್ಲರಿಗೂ ಶಾರ್ವರಿ ನಾಮ ಸಂವತ್ಸರದಲ್ಲಿ ಎಲ್ಲ ರೀತಿಯಿಂದಲೂ ಮಂಗಳವಾಗಲೆಂದು ಬಯಸುತ್ತೇನೆ.

ನಿಮ್ಮ ನೆರವು, ಸಹಕಾರ ಮತ್ತು ಪಾಲ್ಗೊಳ್ಳುವಿಕೆಯಿಂದ ಕಳೆದ ವಿಕಾರಿ ನಾಮ ಸಂವತ್ಸರದ ಫಾಲ್ಗುಣ ಶುದ್ಧ ಪಂಚಮಿಯಂದು (28.2.2020 ರಂದು) ಕಿತ್ತಿಗಾನಹಳ್ಳಿಯ ನಾಗರ ಕ್ಷೇತ್ರದಲ್ಲಿ ನಾಗಾರಾಧನೆಯ ಕಾರ್ಯಕ್ರಮವು ಸುಸೂತ್ರವಾಗಿ ನೆರವೇರಿತು.

ಬೃಹಚ್ಚರಣ ಸಂಘವು ತನ್ನದೇ ಆದ Website ಅನ್ನು ಹೊಂದುವ ನಿಟ್ಟಿನಲ್ಲಿ ಕೆಲಸ ಪ್ರಾರಂಭವಾಗಿದೆ. ಇದರ ಉದ್ಘಾಟನೆಯಾದಮೇಲೆ ಸದಸ್ಯರಿಗೆ ಸಂಘದ ಬಗೆಗಿನ ಮಾಹಿತಿಗಳನ್ನು ಹೆಚ್ಚಿನ ಕ್ಷಮತೆಯಿಂದ ತಲಪಿಸುವ ನಿರೀಕ್ಷೆ ನಮ್ಮದು. ಈಗಾಗಲೇ ಸಂಘದ Facebook Page ನಿರ್ವಹಣೆಯಲ್ಲಿದೆ.

ಸಂಘದ ಕಾರ್ಯಕಾರಿ ಸಮಿತಿಯ ಮನವಿಗಳಿಗೆ ಸ್ಪಂದಿಸಿ ಹಲವಾರು ಸದಸ್ಯರು ವಾರ್ಷಿಕ ನಿರ್ವಹಣಾ ವೆಚ್ಚವನ್ನು ಪಾವತಿಸಿರುತ್ತಾರೆ. ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು. ನಿರ್ವಹಣಾ ವೆಚ್ಚ ನೀಡದ ಸದಸ್ಯರು ಕೂಡಲೇ ಪಾವತಿಸಲು ಬಿನ್ನಹ.

ಮಹಾಮಾರಿ ಕೋವಿಡ್–19 ಬೀಗಮುದ್ರೆ ಕಾರಣದಿಂದ ಸಂಘದ ಕಾರ್ಯಚಟುವಟಿಕೆಗಳಲ್ಲಿ ವಿಳಂಬವಾಗಿದೆ. ಸಹೃದಯ ಸದಸ್ಯರು ಸಹಕಾರ ನೀಡುತ್ತಿರುವುದಕ್ಕೆ ಧನ್ಯವಾದಗಳು.

ಎಲ್ಲರಿಗೂ ಒಳ್ಳೆಯದಾಗಲಿ!



**ಬಿ. ಸುಬ್ರಹ್ಮಣ್ಯಂ**
ಅಧ್ಯಕ್ಷರು

**ಕರ್ನಾಟಕ ಗಾನಕಲಾ ಪರಿಷತ್ತು ಸಂಘದ ಸದಸ್ಯ ಗುರುಪ್ರಸನ್ನರವರಿಗೆ 'ಗಾನಕಲಾಶ್ರೀ' ಪ್ರಶಸ್ತಿಯನ್ನು ಗಿರಿಧರ ಉಡುಪರವರೊಂದಿಗೆ ಹಾಗೂ ಸಂಘದ ಸದಸ್ಯ ಶ್ರೀ ಎಸ್. ಸುದರ್ಶನ್‌ರವರಿಗೆ 'ಗಾನಕಲಾ ಸುವರ್ಣ' ಪ್ರಶಸ್ತಿ ನೀಡಿ ಗೌರವಿಸಿದೆ.**






# ವಾರ್ತಾಚಿತ್ರಗಳು




ತಿರುಮಲ ತಿರುಪತಿ ದೇವಸ್ಥಾನದ ಸಂಗೀತ ಕಾರ್ಯಕ್ರಮದಲ್ಲಿ ಸಂಘದ ಪೋಷಕ ಶ್ರೀ ಬಿ.ಎನ್.ಜಿ. ಪ್ರಸಾದ್





ಸಂಘದ ಸದಸ್ಯೆ ಶ್ರೀಮತಿ ಸುಹಾಸಿನಿ ರವರ ಪತಿ ಶ್ರೀ ಅಜಯ್‌ರವರು "Feasability Studies on the use of shear box for measurement of rheological properties of SCC mixes" Civil Engineering ವಿಷಯದ ಬಗ್ಗೆ ವಿ.ಟಿ.ಯು.ನಲ್ಲಿ ದಿನಾಂಕ 8–2–2020ರಂದು ಪಿ.ಎಚ್‌ಡಿ ಪದವಿ ಪಡೆದ ಸಂದರ್ಭ



ಸಂಘದ ಸದಸ್ಯೆ ಡಾ. ಗಾಯತ್ರಿ ಸಾಯಿನಾಥ್ ಹಾಗೂ ಡಾ. ಸಾಯಿನಾಥ್ ದಂಪತಿಗಳಿಗೆ ರಾಷ್ಟ್ರೀಯ ಮಟ್ಟದ ವಾಸ್ತುಶಾಸ್ತ್ರ ವಿಭಾಗದಲ್ಲಿ ಬೆಳಗೂರು ಅವಧೂತ ಬಿಂದುಮಾಧವ ಶರ್ಮ ಅವರ ಉಪಸ್ಥಿತಿಯಲ್ಲಿ ಸನ್ಮಾನ



ಸಂಘದ ಸದಸ್ಯರಾದ ಶ್ರೀ ವಿಜಯಕುಮಾರ್ ಶ್ರೀಮತಿ ಲತಾ ದಂಪತಿಗಳ ಪುತ್ರಿ ಕು॥ ರಮ್ಯಾ ಅಮೇರಿಕಾ ನಾರ್ತ್ ಕೆರೊಲಿನಾ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ನೆಟ್‌ವರ್ಕ್‌ನಲ್ಲಿ ಎಂ.ಎಸ್. ಪಡೆದಿರುತ್ತಾರೆ



ಸಂಘದ ಸದಸ್ಯರಾದ ಶ್ರೀ ಕೆ.ಸಿ. ಜಯರಾಂ, ಶ್ರೀ ನಳಿನಿರವರ ಪುತ್ರ ಶ್ರೀ ಅರುಣ್ ಕಂಪ್ಯೂಟರ್ ಸೈನ್ಸ್‌ನಲ್ಲಿ ಅಮೇರಿಕಾದ ಚಿಕಾಗೊ ಇಲಿಯಾನ್ಸ್ ಇನ್‌ಸ್ಟಿಟ್ಯೂಟ್‌ನಲ್ಲಿ ಎಂ.ಎಸ್. ಪಡೆದಿರುತ್ತಾರೆ



ನಮ್ಮ ಸಮುದಾಯದ 'ಕಸಿನ್ಸ್ ಕೂಟ'ದವರು ನೂತನ ವರ್ಷ 2020ರ ಸಂಭ್ರಮದಲ್ಲಿ



ಗಿರಿನಗರ ಸಂಗೀತ ಸಭಾ ತ್ಯಾಗರಾಜಾರಾಧನಾದಲ್ಲಿ ಭಾಗವಹಿಸಿದ ನಮ್ಮ ಸಮುದಾಯದ ಕಲಾವಿದರು







**ಮೈ.ಮಂ.ದ್ರಾ. ಬೃಹಚ್ಚರಣ ಸಂಘ**
(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆ)
**ಕಾರ್ಯಕಾರಿ ಸಮಿತಿ**
ಶ್ರೀಯುತರುಗಳಾದ
**ಬಿ. ಸುಬ್ರಹ್ಮಣ್ಯಂ, 9449869667**
ಅಧ್ಯಕ್ಷರು
**ಎಚ್.ಕೆ. ಶಶಿಧರ್, 9845173766**
ಉಪಾಧ್ಯಕ್ಷರು
**ಎಸ್.ಸಿ. ಶ್ರೀನಿವಾಸ, 9483725949**
ಕಾರ್ಯದರ್ಶಿ
**ಅರುಣ್ ವಿ., 9880166001**
ಸಹಕಾರ್ಯದರ್ಶಿಗಳು
**ಎಸ್. ಸತ್ಯನಾರಾಯಣ, 9980945699**
ಖಜಾಂಚಿ
**ಟಿ.ಪಿ. ಸೂರ್ಯನಾರಾಯಣ, 9945484268**
ಸಹ ಖಜಾಂಚಿ

**ಸದಸ್ಯರು**
**ಎಸ್. ಸೋಮಸುಂದರ, 9900113298**
**ಕೆ.ಜಿ. ವೆಂಕಟೇಶ್, 9964012687**
**ಮಂಜುನಾರಾಯಣ್ ಕೆ. 9886114279**
**ಕೆ. ಗುಂಡಪ್ಪ, 9845332315**
**ಕೆ.ಬಿ.ಎಸ್. ಶರ್ಮ, 94820 87344**
**ಟಿ.ಎಸ್. ರಮೇಶನ್, 9663874531**
**ಸರಸ್ವತಿ ನಟರಾಜನ್, 9480619730**
**ಆರ್. ಗಣೇಶ್ ಶ್ರೀಧರ್, 9880187686**
**ಟಿ.ಎಸ್. ನಾಗೇಶ್, 9980662118**
**ಶಂಕರಪ್ರಸಾದ್ ಬಿ.ಆರ್., 9845663833**
**ಟಿ.ಎನ್. ರವಿಕಿರಣ್, 9972677005**
**ಅರುಣ್ ಸೇತುರಾಮ್, 9900313929**
**ನಿತಿನ್‌ಭಾಸ್ಕರ್, 9844417333**
<u>ಲೆಕ್ಕಪರಿಶೋಧಕರು</u>
**ಬಿ.ಎನ್.ಜಿ. ಪ್ರಸಾದ್, 9845128229**

**ಗೌರವ ಸಂಪಾದಕ ಮಂಡಳಿ-ಬೃಹಚ್ಚರಣ ಪತ್ರಿಕೆ**
**ಸಂಘದ ಅಧ್ಯಕ್ಷರು, ಕಾರ್ಯದರ್ಶಿ**
**ಎಸ್. ಸೋಮಸುಂದರ, 9900113298**
ನಿಕಟಪೂರ್ವ ಅಧ್ಯಕ್ಷರು
**ಕೆ.ಸಿ. ನಟರಾಜ್, 9845113475**
ಸಂಪಾದಕರು
**ಲಲಿತಾ ರಮೇಶ್, 9945199637**
ಉಪಸಂಪಾದಕಿ
**ಶಿವಕುಮಾರ್ ಎನ್., 6362337254**
ಛಾಯಾಗ್ರಾಹಕ

# ನಾಗಾರಾಧನೆ, 2020

ಆನೇಕಲ್ಲು ತಾಲ್ಲೂಕು ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ ನಾಗಾರಾಧನೆಯು ದಿನಾಂಕ 28-02-2020ರ ಶುಕ್ರವಾರದಂದು ಹಿಂದಿನ ವರ್ಷಗಳಂತೆಯೇ ನೆರವೇರಿತು. ಸಮುದಾಯದವರು ಭಕ್ತಿ, ಶ್ರದ್ಧೆಗಳಿಂದ ಪ್ರತಿಷ್ಠಾಪಿಸಲ್ಪಟ್ಟಿರುವ ನಾಗರುಗಳಿಗೆ ತನಿ ಎರೆದು ನಂತರ ಬ್ರಹ್ಮಚಾರಿ ವಟುಗಳಿಗೆ ಪಾದಪೂಜೆ ಮಾಡಿ ದಕ್ಷಿಣೆ, ತಾಂಬೂಲ, ವಸ್ತ್ರ ನೀಡಿ ಸುಬ್ರಹ್ಮಣ್ಯದೇವರ ರೂಪವನ್ನೇ ಅವರಲ್ಲಿ ಕಂಡು ಧನ್ಯರಾದರು.

ಬೆಳಗ್ಗೆ ಕ್ಷೇತ್ರದ ದೇವತೆಗಳಾದ ಭೂನೀಳಾ ಸಮೇತ ಶ್ರೀನಿವಾಸ ದೇವರು, ಗಣಪತಿ, ಗಾಯತ್ರಿದೇವಿ ಮತ್ತು ವಳ್ಳಿ ದೇವಸೇನಾ ಸಮೇತ ಸುಬ್ರಹ್ಮಣ್ಯಸ್ವಾಮಿಗೆ ಅಭಿಷೇಕ, ಪೂಜೆ, ಅಲಂಕಾರ ಮಾಡಲಾಗಿತ್ತು. ನಂತರ ವಳ್ಳಿ, ದೇವಸೇನಾ ಸಮೇತ ಸುಬ್ರಹ್ಮಣ್ಯ ದೇವರ ಉತ್ಸವಮೂರ್ತಿಗಳನ್ನು ಮಂಗಳವಾದ್ಯ ಸಮೇತ ಮೆರವಣಿಗೆಯಲ್ಲಿ ಶ್ರೀ ಸೂರ್ಯ ನಾರಾಯಣ ದೀಕ್ಷಿತ್ ಮತ್ತು ಸಹೋದರರ ಸಮಕ್ಷಮದಲ್ಲಿ ನಾಗರಕಟ್ಟೆಗೆ ತರಲಾಯಿತು. ಕ್ಷೇತ್ರದ ಪುರೋಹಿತರಿಂದ ಅನ್ನದಾನಕ್ಕೆ ದೇಣಿಗೆ ನೀಡಿದ ದಾನಿಗಳ ಹೆಸರಿನಲ್ಲಿ ಪೂಜಾ ಸಂಕಲ್ಪ ನೆರವೇರಿಸಲಾಯಿತು.

ಮಹಾಮಂಗಳಾರತಿ ಆದ ನಂತರ ಸಮುದಾಯದ ರಾಜಾಪುರ ಕುಟುಂಬದವರು ಹಾಗೂ ಶ್ರೀ ಆರ್. ಗೋಪಾಲರಾವ್ ಕುಟುಂಬದವರಿಂದ ಪಾನಕ, ಕೋಸಂಬರಿ, ಹುಳಿ ಅವಲಕ್ಕಿಗಳನ್ನು ಪ್ರಸಾದ ರೂಪದಲ್ಲಿ ವಿತರಿಸಲಾಯಿತು. ಪ್ರಸಾದ ಭೋಜನ ಸಮಯದಲ್ಲಿ ಸಂಘದ ಸದಸ್ಯರಾದ ಶ್ರೀಮತಿ ಬಿ.ಎಸ್. ಉಮಾ ಜಯರಾಂರವರು ತಮ್ಮ ಮೊಮ್ಮಗ ಜನಿಸಿದ ಸವಿನೆನಪಿನಲ್ಲಿ ಲಾಡು ಪ್ರಾಯೋಜಿಸಿದರು. ಇದೇ ಸಂದರ್ಭದಲ್ಲಿ ಬೃಹಚ್ಚರಣ ಸಂಘದ ವತಿಯಿಂದ ಎರಡೆರಡು ಉದ್ದಿನವಡೆಗಳನ್ನು ಪ್ರಸಾದ ರೂಪದಲ್ಲಿ ಸದಸ್ಯರ ಕುಟುಂಬ ವರ್ಗದವರಿಗೆ ವಿತರಿಸಲಾಯಿತು.

ಶ್ರೀ ಅನಂತಶೇಖರ್ ಮತ್ತು ಶ್ರೀಮತಿ ಭಾರತಿಯವರು ಸ್ವಪ್ರೇರಣೆಯಿಂದ ದೇವರ ನಾಮಗಳನ್ನು ಹೇಳಿದರು. ನಾಗಾರಾಧನೆಯು ಶುಕ್ರವಾರವಾಗಿದ್ದು, ರಜಾದಿನವಾಗಿಲ್ಲದಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಮುದಾಯದ ಕುಟುಂಬದವರು ಭಾಗವಹಿಸಿರಲಿಲ್ಲ ಹಾಗೂ ಹೆಚ್ಚಿನ ವಟುಗಳ ಅನುಪಸ್ಥಿತಿ ಎದ್ದು ಕಾಣುತ್ತಿತ್ತು. ಸಮುದಾಯದವರು ಮುಂದಿನ ದಿನಗಳಲ್ಲಿ ಸಂಘ ಹಮ್ಮಿಕೊಳ್ಳುವ ಕಾರ್ಯಕ್ರಮಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸುತ್ತಾರೆಂದು ಆಶಿಸೋಣ. ಸಂಘದ ವತಿಯಿಂದ ಬಾಣಸಿಗರಿಗೆ ಪ್ರತಿ ವರ್ಷದಂತೆ ಈ ವರ್ಷವೂ ವಸ್ತ್ರದಾನ ಮಾಡಲಾಯಿತು.

ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಕಾರ್ಯಕಾರಿ ಸಮಿತಿಯು ಸಂಘದ ಕಾರ್ಯ ಚಟುವಟಿಕೆಗಳಿಗೆ ದೇಣಿಗೆ ನೀಡಿದವರಿಗೆ ಅಭಿನಂದಿಸಿದ್ದಾರೆ. ಕಿತ್ತಿಗಾನ ಹಳ್ಳಿಯಲ್ಲೇ ನೆಲೆಸಿರುವ ಸಂಘದ ಖಜಾಂಚಿ ಶ್ರೀಯುತ ಎಸ್. ಸತ್ಯನಾರಾಯಣರವರು ವಿಶೇಷ ಆಸಕ್ತಿ ವಹಿಸಿ ಸುಗಮವಾಗಿ ಕಾರ್ಯಕ್ರಮ ನಡೆಯಲು ಅನುವು ಮಾಡಿದ್ದು. ಇವರೊಂದಿಗೆ ಶ್ರೀ ವಿ.ಎಸ್. ಮಣಿ ಹಾಗೂ ಟಿ.ಎಸ್. ಮಣಿ ಅವರು ಸಹಕಾರ ನೀಡಿದರು.

◆ **ಲಲಿತಾ ರಮೇಶ್**
**9945199637**



# ಸಂಕ್ರಾಂತಿ

**ಸಂಸ್ಕೃತಿ–ಸಂಪ್ರದಾಯ–ಸಂಭ್ರಮದ ಹಬ್ಬ**

ದಕ್ಷಿಣದಿಂದ ಉತ್ತರಾಭಿಮುಖವಾಗಿ ಸೂರ್ಯಪಥ ಬದಲಿಸುವ ಮುಹೂರ್ತವೇ ಮಕರ ಸಂಕ್ರಾಂತಿ. ಇದಕ್ಕೇ ಈ ಸಮಯವನ್ನು ಬದಲಾವಣೆಯ ಪುಣ್ಯಕಾಲ ಎನ್ನುತ್ತಾರೆ. ನಮ್ಮ ರೈತರಿಗೆ ಇದು ಸುಗ್ಗಿ ಹಬ್ಬ. ತಮಿಳುನಾಡಿನಲ್ಲಿ ಪೊಂಗಲ್. ಪಂಜಾಬಿನಲ್ಲಿ ಲೋಹ್ಡಿ. ಒಟ್ಟಿನಲ್ಲಿ ದೇಶದ ಎಲ್ಲೆಡೆಯೂ ಒಂದಲ್ಲಾ ಒಂದು ಸಂಭ್ರಮದ ಕಾಲ...!

ಜೀವನ ಅಂದ್ರೆನೇ ಹಾಗೆ...!

| | |
|---|---|
| ಬೇವು+ಬೆಲ್ಲ | ಸಿಹಿ+ಕಹಿ |
| ಕೊಬ್ಬರಿ+ಕಬ್ಬು | ಎಳ್ಳು+ಬೆಲ್ಲ |
| ಸುಖ+ದುಃಖ | ಕತ್ತಲು+ಬೆಳಕು |
| ನೋವು+ನಲಿವು | ಎಲ್ಲದರ ಸಮ್ಮಿಳನವೇ 'ಜೀವನ'. |

ಎಲ್ಲಾರ್ಕು ನಲ್ದಾಗ್ಡು

◆ **ವಿ.ಎಸ್. ಮಣಿ**



## ಸಂಕ್ರಾಂತಿ ಸಂಭ್ರಮ ನಮ್ಮವರ ಮನೆಗಳಲ್ಲಿ

















## ಶ್ರೀ ಶೃಂಗೇರಿ ಶಾರದಾ ಪೂರ್ವ ಕಥಾ



**ಸ**ತ್ಯಲೋಕದಿ ದೇವ ಸಭೆ ನಡೆದಿದೆ. ಚತುರ್ಮುಖ ಬ್ರಹ್ಮನಿಗೆ ವೇದಾಧ್ಯಯನ ಶ್ರವಣ ಮಾಡಿಸುವ ಆಸೆ ಮೂಡಿತು. ಆಹ್ವಾನ ವಿಶೇಷವಾದ ಅತಿಥಿಗಳು ನಾರದರು. ದೂರ್ವಾಸರು ಋಷಿಗಳು, ಬ್ರಹ್ಮಜ್ಞಾನಿಗಳು ಎಲ್ಲಾ ಸಭೆಗೆ ಬಂದರು. ಆರಂಭದಿ ವೇದಪಾಠ ದೂರ್ವಾಸರು ಪ್ರಾರಂಭಿಸಿದರು. ಸ್ವಲ್ಪ 'ಸ್ವರಭಂಗ'ವಾಯ್ತು. ವಾಗ್ದೇವಿ ವೇದಮಾತೆ ನಕ್ಕಳು. ದುರ್ವಾಸರಿಗೆ ಕೋಪ–ಸಭೆಯಲ್ಲಿ ಸ್ತ್ರೀ ಸಹಜ ಲಜ್ಜೆ ಇಲ್ಲ. ಅಪಹಾಸ್ಯ ಮಾಡಿದೆ. ನೀನು ಭೂಲೋಕದಿ ಜನ್ಮತಾಳು ಎಂದು ಶಾಪವಿತ್ತರು. ಸರಸ್ವತಿ ಅನಿವಾರ್ಯ ಶಾಪ ಸ್ವೀಕಾರ. ಆದರೆ ಯಾವ ಕಾರಣವೂ ಇಲ್ಲದೆ ಕಾರ್ಯ ನಡೆಯಲ್ಲ ಎಂದು ಜ್ಞಾನದಿ ಅರಿತು ಪರಿಹಾರಕ್ಕೆ ಪ್ರಾರ್ಥಿಸಿದಳು.

**ದೂರ್ವಾಸರು :** "ಭೂಲೋಕದಿ ಧರ್ಮ ಸ್ಥಾಪನೆಗೆ ಪರಶಿವನ ಅವತಾರ. ಶ್ರೀಶಂಕರ ಅಭಿದಾನದಿಂದ ಆಗುತ್ತದೆ. ನೀನು ಗೃಹಸ್ಥಾಶ್ರಮದಿ ಪತಿಯೊಡನೆ ಇದ್ದು ಶಾಸ್ತ್ರಾರ್ಥ ವಿಚಾರದಿ ವಾದಗೈದು ಗೆದ್ದ ನಂತರ ಶಾಪವಿಮೋಚನೆ ಸತ್ಯಲೋಕ ಪ್ರಾಪ್ತಿ ಎಂದರು. ಶೋಣಭದ್ರಾತೀರ ವಿಷ್ಣು ಮಿಶ್ರ ಭಟ್ಟಾಚಾರ್ಯ ತಂದೆ ಮಗಳು "ಸರಸವಾಣಿ" (ಉಭಯ ಭಾರತಿ) ನಾಮ–ಇಟ್ಟರು. ಬಾಲ್ಯ ಕಳೆದು ಯೌವನ, ವಿವಾಹ, ಮಾಹಿಷ್ಮತಿ ನಗರ "ಹಿಮಮಿಶ್ರ ಭಟ್ಟಾಚಾರ್ಯರ" ಮಗ "ಮಂಡನಮಿಶ್ರ" (ಬ್ರಹ್ಮನ ಅಂಶ) ವಿವಾಹ ವಿದ್ಯುಕ್ತ ವೈಭವದಿ ನಡೆಯಿತು. ವೈವಾಹಿಕ ಜೀವನ ಆರಂಭ.

**ತಂದೆ ಹಿತವಾಕ್ಯ :** ನೀನು ಅತ್ತೆ ಮನೆಯಲ್ಲಿ ಸದ್ವರ್ತನೆಯಿಂದ ಮೆಚ್ಚಿಗೆ ಪಡೆ ಸಾಮಾನ್ಯವಾಗಿರುವ ಅತ್ತೆ, ಸೊಸೆ ಅಪವಾದ ಪರಿಹರಿಸು. ಅತ್ತೆ ಆಜ್ಞೆಯಂತೆ ನಡೆ. ತಾಯಿಯಂತೆ ಗೌರವಿಸು. ಅದಕ್ಕೆ ಸಹನೆ, ವಿಶ್ವಾಸ ಬಹಳ ಮುಖ್ಯ. ಲಜ್ಜೆ ಪರಮ ಭೂಷಣ. ಸಂಸಾರ ಧರ್ಮ ಸ್ತ್ರೀ–ಪುರುಷರಿಗೆ ಬೇರೆ ಬೇರೆ ವಿಧವಾಗಿರುತ್ತೆ ಇದನ್ನು ಅರಿ. ಇಂದ್ರಿಯಗಳಿಗೆ ವಶಳಾಗದಿರು ಎಂದು ಹೇಳಿದರು. ಹೆಣ್ಣು ಕಳುಹಿಸುವಾಗ ಮಗಳಿಂದ ಏನಾದರೂ ಲೋಪವಾದರೆ ಕ್ಷಮಿಸಿ, ನನ್ನ ಮಗಳಲ್ಲ ನಿಮ್ಮ ಮಗಳೆಂದು ಭಾವಿಸಿ ಎಂದು ತಿದ್ದಿ ಅವರನು ಮಂಡನಮಿಶ್ರರ ತಂದೆ, ತಾಯಿಗಳಲ್ಲಿ ಅರಿಕೆ ಮಾಡಿಬಿಟ್ಟು ಬಂದರು. ಅಂತಯೇ ಭಾರತಿ ಆದರ್ಶನಾರಿಯಾಗಿ, ಅಲಂಕಾರಪ್ರಾಯಳಾಗಿ ತನ್ನ ಜ್ಞಾನ ಮತ್ತು ವಿದ್ಯೆಯಿಂದ ಗೆದ್ದು ದೇವಪಟ್ಟ ಪಡೆದು ಸತ್ಯಲೋಕಕ್ಕೆ ತೆರಳಿದಳು.

◆ **ಭ್ರಮರಾ ಗೋಪಿನಾಥ್**
6366701153

## ಶ್ರೀರಾಮನವಮಿ



**ಚೈ**ತ್ರಮಾಸದ ನವಮಿ ಶ್ರೀರಾಮನು ಅವತರಿಸಿದ ದಿನ. ಧರಣಿಯಲ್ಲಿ ರಾಕ್ಷಸರ ಹಾವಳಿಯು ಹೆಚ್ಚಿ ಋಷಿಮುನಿಗಳಿಗೆ ತೀವ್ರ ಬಾಧೆಯಾದಾಗ ರಾಕ್ಷಸ ಸಂಹಾರಕ್ಕಾಗಿ ವಿಷ್ಣುವು ಮಾನವನಾಗಿ ಅವತರಿಸಿದ ದಿನ. ಶ್ರೀರಾಮನು ಭಕ್ತರ ಮನಸ್ಸಿಗೆ ತಂಪನ್ನು ಮಾಡಿದಂತೆ, ಅವನ ನೆನಪಿನಲ್ಲಿ, ಮಧ್ಯಾಹ್ನದ ಉರಿಬಿಸಿಲಿನಲ್ಲಿ ತಂಪು ಮಾಡಲು ಪಾನಕ ಕೋಸಂಬರಿಗಳನ್ನು ಹಂಚುವರು. ಈ ಪದ್ಧತಿಯನ್ನು ಎಲ್ಲ ಜಾತಿಯ ಜನರೂ ಆಚರಿಸುತ್ತಾರೆ. ಕೆಲವರು ರಾಮನ ಮೇಲಿನ ಭಕ್ತಿಯಿಂದ ಉಪವಾಸ ಮಾಡಿ ಜಾಗರಣೆ ಮಾಡುವುದೂ ಉಂಟು, ಎಲ್ಲೆಲ್ಲೂ ರಾಮಭಜನೆ, ರಾಮನಾಮ ಸಂಕೀರ್ತನೆಗಳನ್ನು ಹಾಡುತ್ತಾ ಶ್ರೀ ರಾಮನ ಅನುಗ್ರಹಕ್ಕೆ ಪಾತ್ರರಾಗುತ್ತಾರೆ. ಶ್ರೀರಾಮನ ದೇವಾಲಯಗಳಲ್ಲಿ ವಿಗ್ರಹವನ್ನಿಟ್ಟು ರಥೋತ್ಸವವನ್ನೂ ಮಾಡುವರು. ಅನೇಕ ಕಡೆ ಹರಿಕಥೆಗಳೂ, ಸಂಗೀತ ಕಛೇರಿಗಳೂ ನಡೆಯುತ್ತವೆ. ದೊಡ್ಡ ದೊಡ್ಡ ವಿದ್ವಾಂಸರು ಇದು ಶ್ರೀರಾಮನ ಸೇವೆಯೆಂದು ಭಾವಿಸಿ ಇಂತಹ ಸಂಗೀತ ಕಛೇರಿಗಳಲ್ಲಿ ಹಾಡುವುದು ತಮ್ಮ ಭಾಗ್ಯವೆಂದು ಭಾವಿಸುತ್ತಾರೆ. ಚೈತ್ರ ಶುದ್ಧ ಪಾಡ್ಯಮಿಯಿಂದ ನವಮಿಯವರೆಗೆ ರಾಮಾಯಣ ಪಾರಾಯಣ ಮಾಡುವರು. ಶ್ರೀರಾಮನ ಪಟವನ್ನಿಟ್ಟು ಅಲಂಕರಿಸಿ, ಪೂಜಿಸಿ, ಭಜನೆ, ಹಾಡುಗಳಿಂದ ಶ್ರೀರಾಮನನ್ನು ಪೂಜಿಸುವರು. ರಾಮಾಯಣದ ಬಗ್ಗೆ ಪ್ರವಚನಗಳನ್ನೂ ಮಾಡುವುದುಂಟು.

# ಹೇಗೆ ಬದುಕಬೇಕು

**ಸಂ**ಸಾರದಲ್ಲಿ ಹೇಗೆ ಬದುಕಬೇಕು ಎಂಬ ಪ್ರಶ್ನೆಗೆ ದೊಡ್ಡವರನೇಕರು ಅನೇಕ ರೀತಿಗಳಲ್ಲಿ ಉತ್ತರವಿತ್ತಿದ್ದಾರೆ. ಅವುಗಳಲ್ಲಿ ಅಲ್ಲಮಪ್ರಭುವಿನದು ತುಂಬ ವಿಶಿಷ್ಟ.

ಬಾಳಿನಲ್ಲಿ ಆಗಾಗ ಕಷ್ಟ ಕೋಟಲೆ, ಸಮಸ್ಯೆ ಸವಾಲುಗಳು ಎದುರಾಗುತ್ತವೆ. ಅವುಗಳನ್ನು ಗೆಲ್ಲುವುದು ಹೇಗೆ? ಕಲ್ಲಿನಂತಿದ್ದು ಬಿಡುವುದೇ ಉಪಾಯ ಎಂದು ಕೆಲವರ ಉಪದೇಶ. "ಕಲ್ಲಾಗಿ ಇರಬೇಕು ಕಠಿಣ ಭವಶೀರದೊಳಗೆ! ಎಂಬ ವಾಣಿಯನ್ನು ಪ್ರಾತಿನಿಧಿಕವಾಗಿ ಪರಿಗಣಿಸಬಹುದು. ಸರಿಯೇ, ಆದರೆ ಕಲ್ಲಾಗಿರುವುದು ನಿಷ್ಕ್ರಿಯವಾದ ಜಡಸ್ಥಿತಿ. ಅಲ್ಲಮಪ್ರಭು ತನ್ನೊಂದು ವಚನದಲ್ಲಿ ಹೇಳುವುದನ್ನು ಗಮನಿಸೋಣ.

ಕೆಂಡ ಮಳೆ ಕರೆವಲ್ಲಿ ಉದವಾಗಿದಂತಿರಬೇಕು
ಜಲಪ್ರಳಯವಾದಲ್ಲಿ ವಾಯುವಂತಿರಬೇಕು.
ಮಹಾಪ್ರಳಯದಲ್ಲಿ ಆಕಾಶದಂತಿರಬೇಕು.
ಜಗತ್ಪ್ರಳಯವಾದಲ್ಲಿ ತನ್ನ ತಾ ಬಿಡಬೇಕು.
ಗುಹೇಶ್ವರನೆಂಬ ಲಿಂಗ ತಾನಾಗಿರಬೇಕು

'ಕೆಂಡದ ಮಳೆ' ಎಂಬ ಸಶಕ್ತ ರೂಪಕ ವಿಪತ್ತು ಕ್ಲೇಶಗಳ ಭಯಂಕರ ಆಘಾತವನ್ನು ಸೂಚಿಸುತ್ತದೆ. ಅದು ಸುರಿಯುವಾಗ ಕಲ್ಲಾಗಿರುವುದಲ್ಲ. ನೀರಾಗಬೇಕು. ನೀರು ನಿಷ್ಕ್ರಿಯವಾಗಿರದೆ, ಸಚೇತವಾಗಿ ಕೆಂಡದ ಮಳೆಗೆ ಪ್ರತಿಕ್ರಿಯಿಸಿ, ಅದನ್ನು ಶಮಿಸಿ ಗೆಲ್ಲುತ್ತದೆ. ನೀರಿನಲ್ಲಿ ಬಿದ್ದ ಬೆಂಕಿ ಆರಿಹೋಗಲೇಬೇಕು! ಕಲ್ಲು ಸ್ಥಾವರ, ಜಲ ಜಂಗಮ, ಜಂಗಮಸ್ಥಿತಿ ಅಥವಾ ಗತಿಲೇಸು.

ಇದು ಒಂದು ಸ್ತರ. ಮುಂದಿನ ಸ್ತರದಲ್ಲಿ ಅಲ್ಲಮ ಹೇಳುತ್ತಾನೆ. "ಜಲಪ್ರಳಯವಾದಲ್ಲಿ ವಾಯುವಿನಂತಿರಬೇಕು! ಜಲಪ್ರಳಯ ಮಳೆಗಿಂತ ಉಗ್ರವಾದುದು. ವಾಯುವಾಗಿದ್ದುಕೊಂಡು ಅದನ್ನು ಜಯಿಸಬೇಕು. ಅದು ವಾಯುವನ್ನು ಏನು ಮಾಡಬಲ್ಲದು? ಇನ್ನೂ ಮುಂದಿನ ಸ್ತರದಲ್ಲಿ ಅಲ್ಲಮನ ಹೇಳಿಕೆಯಿದು. "ಮಹಾಪ್ರಳಯವಾದಲ್ಲಿ ಆಕಾಶದಂತಿರಬೇಕು!" ಮಹಾಪ್ರಳಯ ಸಾಮಾನ್ಯ ಜಲಪ್ರಳಯಕ್ಕಿಂತ ದೊಡ್ಡದು. ಅದನ್ನು ಆಕಾಶವಾಗಿದ್ದುಕೊಂಡು ಗೆಲ್ಲಬೇಕು. ಅಜೇಯವಾದುದು ಆಕಾಶ.

ಕಡೆಯಸ್ತರದಲ್ಲಿ ಅಲ್ಲಮನ ಮಾತಿದು. "ಜಗತ್ಪ್ರಳಯವಾದಲ್ಲಿ ತನ್ನ ತಾ ಬಿಡಬೇಕು, ಗುಹೇಶ್ವರಾ ಲಿಂಗ ತಾನಾಗಿರಬೇಕು." ಇದು ಅದ್ವೈತದ ನಿಲುವು, ಜಲ ಪ್ರಳಯ ಮಿಕ್ಕ ಪ್ರಳಯಕ್ಕಿಂತ ಘೋರ. ಅದನ್ನು ತನು ಭಾವ ತ್ಯಾಗದಿಂದ ಅನುಭಾವದ ಭಂಗಿಯಿಂದ ಗೆಲ್ಲಬೇಕು. ಅದ್ವೈತ ವಿಧಾನವನ್ನು ಯಾವುದೇನು ಮಾಡಬಲ್ಲದು. ಯಾರೇನು ಮಾಡಬಲ್ಲರು! ಅವನು ಎಲ್ಲಕ್ಕೂ ಅತೀತ, ಇದ್ದೂ ಇಲ್ಲದ ಮಹಾಂತ!

ಹೇಗೆ ಅಲ್ಲಮನ ವಚನ ಸಂಘರ್ಷದ ಮತ್ತು ಸಾಮರಸ್ಯದ ಪ್ರತಿಕ್ರಿಯೆಯಿಂದ ಕೂಡಿ ಸಂಕೀರ್ಣವಾಗದೆ; ಹಂತ ಹಂತವಾಗಿ ಸುಸಂಬದ್ಧವಾಗಿ ಬೆಳೆಯುವ, ಲೌಕಿಕದಿಂದ ಮೊದಲಾಗಿ ಲೋಕೋತ್ತರದಲ್ಲಿ ಪರ್ಯಾವಸಾನಗೊಳ್ಳುವ ಒಂದು ಬೆಳಕಾಗಿ ಪರಿಣಮಿಸಿದೆ. ಸಂಸಾರಿಗಳಿಗೊಂದು ಭರವಸೆ ಮತ್ತು ಸಾಂತ್ವನವಾಗಿದೆ.



◆ ಎನ್. ಶ್ರೀನಿವಾಸಯ್ಯ
7899318098

**ದೇಣಿಗೆ ನೀಡಿದ ದಾನಿಗಳು (ಹುಂಡಿಯಿಂದ)**

| | |
|---|---|
| ಜಿ. ಅಶೋಕ್ ಕುಮಾರ್ | 180 |
| ಲಲಿತಾ ಎಸ್. ಕಾಮತ್ | 242 |
| ಜಿ. ಅಶೋಕ್ ಕುಮಾರ್ | 490 |
| ಎಸ್. ಕೃಷ್ಣ | 500 |
| ಎ.ಆರ್. ಸುಬ್ಬರಾವ್ | 500 |
| ಕೆ.ಬಿ.ಎಸ್. ಶರ್ಮ | 500 |
| ಆರ್.ಎ. ಶ್ರೀಕಾಂತ್ | 654 |
| ಆರ್. ರಮೇಶ್ | 700 |
| ಎಸ್.ಆರ್. ಲತಾ | 750 |
| ಜಿ. ಪದ್ಮನಾಭ | 771 |
| ವೆಂಕಟೇಶ್ ಬಾಬು | 801 |
| ಕೆ.ಜಿ. ಶ್ರೀನಿವಾಸ್ | 946 |
| ಎನ್.ವಿ. ರಮೇಶ್ | 1001 |
| ವಿಠ್ಠಲ್ ದಾಸ್ ಕಾಮತ್ | 1001 |
| ಜಿ.ಎಸ್. ನಾಗರಾಜ್ | 518 |
| ಆರ್.ಎಸ್. ವೆಂಕಟೇಶ್ | 1020 |
| ಎ. ವೆಂಕಟೇಶ್ | 1021 |
| ತಾರಾ ರವೀಂದ್ರ | 1111 |
| ಬಿ. ಸುಬ್ರಹ್ಮಣ್ಯಮ್ | 1450 |
| ಡಾ॥ ಸ್ವಾಮಿನಾಥ್ | 1950 |
| ಎಸ್. ಶೈಲೇಶ್ | 150 |
| ವಿ.ಸತ್ಯ | 20 |
| ಸುಮಿತ್ರಮ್ಮ | 100 |

**ಕಲ್ಯಾಣೋತ್ಸವ : ಸುಮಾ ಗೋಪಾಲ್, 2500**
**ವಿದ್ಯಾ ನಿಧಿ : ಇಂದಿರಮ್ಮ, 500**
**ಹೊಸ ಸದಸ್ಯರು : ಶುಭಾ ಛಾಯಾಪತಿ, ಮೈಸೂರು, 1000**


## ಶಂಕರ ಜಯಂತಿ



ಬೃಹಚ್ಚರಣ ಸಂಘದ ವತಿಯಿಂದ ಪ್ರತಿವರ್ಷ ನಡೆಸಿಕೊಂಡು ಬರುತ್ತಿರುವಂತೆ ನೂತನ ಶಾರ್ವರಿನಾಮ ಸಂವತ್ಸರದ ವೈಶಾಖ ಶುದ್ಧ ಪಂಚಮಿಯಂದು (28ನೇ ಏಪ್ರಿಲ್ 2020ರಂದು) ಶಂಕರಜಯಂತಿಯನ್ನು ಆಚರಿಸಲು ಸಂಕಲ್ಪಿಸಲಾಗಿತ್ತು. ಕರೋನ ನಿಮಿತ್ತ ಈ ಕಾರ್ಯಕ್ರಮವನ್ನು ನಡೆಸಲಾಗಲಿಲ್ಲ. ಬದಲಾಗಿ ತಮ್ಮ ಮನೆಗಳಲ್ಲೇ ಸಂಘದ ಸದಸ್ಯ ಕುಟುಂಬದವರು ಶ್ರದ್ಧಾ ಭಕ್ತಿಯಿಂದ, ರುದ್ರಾಭಿಷೇಕ, ವೇದ ಪಠಣ, ಭಕ್ತಿ ಸಂಗೀತ, ಪ್ರವಚನ ಮುಂತಾದುವುಗಳನ್ನು ಸಮರ್ಪಿಸಿ ಕೃತಾರ್ಥರಾದರು. ಇದು ಮನಸ್ಸಿಗೆ ನೆಮ್ಮದಿ ನೀಡಿದರೂ ನಮ್ಮವರೆಲ್ಲ ಒಂದೆಡೆ ಸೇರಲಾಗಲಿಲ್ಲವೆಂದು ನೋವಿದೆ. ಮುಂದಿನ ಬಾರಿಯಾದರೂ ಎಲ್ಲರು ಒಂದುಗೂಡುವಂತಾಗಲೆಂದು ಹಾರೈಸುತ್ತೇನೆ.

◆ ಬಿ. ಸುಬ್ರಹ್ಮಣ್ಯಂ
ಅಧ್ಯಕ್ಷರು

## ಕರೋನ



ಕಲಿಗಾಲದಿ ಇವೆಲ್ಲಾ ಭೂಷಣ ।
ಮಲಿನವಾಗಿದೆ ವಾತಾವರಣ ॥

ಶಿರಕ್ಕೆ ಭೂಷಣ ಹೆಲ್ಮೆಟ್ ।
ಬಾಯಿಗೆ ಭೂಷಣ ಹೆಲ್‌ಸೆಟ್ ॥

ಕೂರಲು ಭೂಷಣ ಕಾರು ।
ಸೇರಲು ಭೂಷಣ ಬಾರು ॥

ಶರೀರಕ್ಕೆ ಶೋಧನ ಸ್ಕ್ಯಾನ್ ।
ತಿರುಗಲು ಬೇಕು ವ್ಯಾನ್ ॥

ನಡೆಯಲಿ ಬೇಕು ಚಕ್ರ ಚಪ್ಪಲಿ ।
ಕುಡಿಯಲು ಬೇಕು ಚಹಾ ಕಪ್ಪಲಿ ॥

ತಿರುಗಲು ಬೇಕು ಊಬರ್‌ಕಾರ್ ।
ಎಲ್ಲಾ ಸಂಗ್ರಹಕೆ ಬೇಕು ಸೈಬರ್ ॥

ನೋಡಲು ಬೇಕು ಫೇಸ್‌ಬುಕ್ ।
ಕಾಣಲು ಬೇಕು ಹೊಸಲುಕ್ ॥

ಬೇಕೆಬೇಕು ಇಂಟರ್‌ನೆಟ್ ।
ಸಾಕೆಸಾಕು ಮಸ್ಕಿಟೋ ನೆಟ್ ॥

ಲೆಕ್ಕಕ್ಕೆ ಬೇಕು ಕ್ಯಾಲಿಕಲೇಟರ್ ।
ಅಪಾಯಕ್ಕೆ ಇರಬೇಕು ವೆಂಟಿಲೇಟರ್ ॥


ಕಂಠಕೆ ಬೇಕು ನಾಮಫಲಕ ।
ಸೊಂಟಕೆ ಬೇಕು ವಿಧವಿಧ ಝಳಕ ॥


ಎಲ್ಲೆಡೆ ಹರಡಿದೆ ಕರೋನ ಭೀತಿ
ಎಲ್ಲರು ಸೇರಿದರೆ ಫಜೀತಿ ॥

ಸದಾ ತೊಳೆಯುತ್ತಿರಿ ಕೈ ।
ಎಂದೆಂದೂ ಮುಟ್ಟದಿರಿ ಯಾರ ಮೈ ॥


ಎಲ್ಲೆಲ್ಲೂ ಹರಡುತ್ತಿದೆ ವಿಷಕ್ರಿಮಿ
ಎಲ್ಲರೂ ಕೈ ಮುಗಿದು ಮಾಡಿ ನಮಾಮಿ ॥

◆ ಭ್ರಮರಾ ಗೋಪಿನಾಥ್
6366701153





ನಮ್ಮವರು

# ಲಯ ವಿದ್ವಾನ್ ಎಸ್. ಸುದರ್ಶನ್

**ಬಿ**ನ್ನಮಂಗಲದ ಬೃಹಚ್ಚರಣ ಪರಿವಾರ ವರ್ಗಕ್ಕೆ ಸೇರಿದವರಾದ ಡಾ॥ ಬಿ. ಸುಬ್ಬರಾವ್ ಮತ್ತು ತಾಯಿ ಗಮಕಿ ಶ್ರೀಮತಿ ವಿಜಯಮ್ಮ ಅವರ ಪುತ್ರ ಶ್ರೀ ಎಸ್. ಸುದರ್ಶನ್‌ರವರು ದಿನಾಂಕ 11.9.1952ರಂದು ಜನಿಸಿದರು. ಮೂಲತಃ ಮಂಡ್ಯದ ವಾಸಿಗಳಾದ ಶ್ರೀಯುತರು ಎಂ.ಎ., ಎಲ್.ಎಲ್.ಬಿ. ಪದವೀಧರರು. ವಕೀಲ ವೃತ್ತಿಯನ್ನು ಆಯ್ದುಕೊಂಡು, ವೃತ್ತಿ ಮತ್ತು ಪ್ರವೃತ್ತಿಯಲ್ಲಿ ಸಮತೋಲನವನ್ನು ಕಾಯ್ದುಕೊಂಡು ಬಂದಿದ್ದಾರೆ.



ನಾಡಿನ ಖ್ಯಾತ ಮೃದಂಗ ವಿದ್ವಾನ್ ದಿ| ಟಿ.ಎ.ಎಸ್. ಮಣಿಯವರಲ್ಲಿ ಸುಮಾರು 47 ವರ್ಷಗಳಿಂದ ಲಯವಾದ್ಯ ಅಭ್ಯಾಸ ಮಾಡಿದ್ದಾರೆ. ತಮ್ಮ ಗುರುಗಳೊಂದಿಗೆ ಅಮೇರಿಕಾ, ಇಂಗ್ಲೆಂಡ್, ಸ್ಕಾಟ್ಲೆಂಡ್, ಸ್ವಿಟ್ಜರ್ಲ್ಯಾಂಡ್, ಕ್ರೋವೇಷಿಯಾ, ಆಸ್ಟ್ರೇಲಿಯಾ, ರಷ್ಯಾ ಮುಂತಾದ ಅಂತರ ರಾಷ್ಟ್ರೀಯ ಕಾರ್ಯ ಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಆಕಾಶ ವಾಣಿ ನಡೆಸುವ ರೇಡಿಯೋ ಸಂಗೀತ ಸಮ್ಮೇಳನದಲ್ಲೂ ಶ್ರೀಯುತರು ಭಾಗವಹಿಸಿದ್ದಾರೆ.

ಕಳೆದ 30 ವರ್ಷಗಳಿಂದ ಮೈಸೂರು ಆಕಾಶವಾಣಿ ಮತ್ತು ಬೆಂಗಳೂರು ದೂರದರ್ಶನ ಕಲಾವಿದರಾಗಿ ಮೃದಂಗ ಮತ್ತು ಖಂಜಿರ ವಾದ್ಯಗಳಲ್ಲಿ ಕಾರ್ಯಕ್ರಮವನ್ನು ನೀಡಿರುತ್ತಾರೆ. ರಾಜ್ಯ ಮತ್ತು ಅಂತರರಾಜ್ಯ ಮಟ್ಟದ ಸಂಗೀತ ಕಲಾವಿದರಿಗೆ ಸಾಥ್ ನೀಡಿದ್ದಾರೆ.

ಇದಲ್ಲದೇ ಶ್ರೀಯುತರು ತಮ್ಮನ್ನು ಲೇಖಕರಾಗಿ, ನಾಟಕಕಾರರಾಗಿ ಗುರುತಿಸಿಕೊಂಡಿದ್ದಾರೆ. ಸಂಗೀತ ಕ್ಷೇತ್ರದ ಪುಸ್ತಕಗಳೇ ಅಲ್ಲದೇ ಅನ್ಯ ವಿಚಾರಗಳನ್ನೊಳಗೊಂಡ ಪುಸ್ತಕ ಗಳನ್ನು ಬರೆದು ಪ್ರಕಟಿಸಿರುವುದು ಇವರ ವಿಶೇಷ. ಇವುಗಳಲ್ಲಿ ಕೆಲವನ್ನು ಹೆಸರಿಸುವುದಾದರೆ, ಜ್ಞಾನಕೃಷಿ, ಕುರುಕುಲ ಚೂಡಾಮಣಿ (ನಾಟಕ), ಲಯವಿನೋದ, ಲಯನಿಲಯ, ಮಾಹಿತಿ ಹಕ್ಕು ಕಾಯ್ದೆ, ಶ್ರೀ ಅಯ್ಯಪ್ಪ ಸ್ವಾಮಿ ಚರಿತೆ ಮುಂತಾದವು. ಇದಲ್ಲದೆ ಇನ್ನೂ ಕೆಲವು ಪುಸ್ತಕಗಳು ಮುದ್ರಣ ಹಂತಗಳಲ್ಲಿವೆ.

ಇನ್ನು ಇವರಿಗೆ ದೊರಕಿರುವ ಪುರಸ್ಕಾರಗಳನ್ನು ಹೇಳುವುದಾದರೆ, ಮಂಡ್ಯ ಜಿಲ್ಲಾಡಳಿತದಿಂದ "ಕರ್ನಾಟಕ ರಾಜ್ಯೋತ್ಸವ" ಪ್ರಶಸ್ತಿ, ಕರ್ನಾಟಕ ಸಂಘ, ಮಂಡ್ಯದಿಂದ "ರಾಜ್ಯೋತ್ಸವ" ಪ್ರಶಸ್ತಿ, ಪುರಂದರ ಮತ್ತು ತ್ಯಾಗರಾಜ



ವಾಗ್ಗೇಯಕಾರರ ಆರಾಧನಾ ಸಮಿತಿ, ಮೈಸೂರು ಇವರ ವತಿಯಿಂದ "ಸಂಗೀತ ಕಲಾ ತಪಸ್ವಿ", ನಟರಾಜ ಕಲಾನಿಕೇತನ, ಮಂಡ್ಯ ಇವರಿಂದ "ಮೃದಂಗ ವಾದನ ಚತುರ", ಸತ್ಯಂ ಮ್ಯೂಸಿಕ್ ಅಕಾಡೆಮಿ, ಬೆಂಗಳೂರು ಇವರಿಂದ "ನಾದ ಕೋಕಿಲ", ಗುರು ಎಚ್.ಎಸ್. ಕೃಷ್ಣಮೂರ್ತಿ ಮೆಮೋರಿಯಲ್ ಟ್ರಸ್ಟ್, ತುಮಕೂರು ಇವರಿಂದ "ವಿದ್ಯಾಪೀಠ ಗುರುವರ", ಜೆ.ಎಸ್.ಎಸ್. ಸಂಗೀತ ಸಭಾ, ಮೈಸೂರು ಸಂಸ್ಥೆಯಿಂದ 22ನೇ ಸಂಗೀತ ಸಮ್ಮೇಳನದಲ್ಲಿ ಅಭಿನಂದನೆ, ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ ಇವರಿಂದ "ನಮ್ಮ ಸಾಧಕರು," ಸಾಂಸ್ಕೃತಿಕ ಸಂಘಟನೆಗಳ ಒಕ್ಕೂಟದಿಂದ "ಡಾ॥ ಬಾಲಗಂಗಾಧರನಾಥ ಸ್ವಾಮೀಜಿ ಕಲಾ ಪ್ರಶಸ್ತಿ" ಮತ್ತು ಇತ್ತೀಚೆಗಷ್ಟೇ ಕರ್ನಾಟಕ ಗಾನಕಲಾ ಪರಿಷತ್ ಸುವರ್ಣ ಮಹೋತ್ಸವ ಸಂದರ್ಭದಲ್ಲಿ "ಗಾನಕಲಾ ಸುವರ್ಣ" ಪ್ರಶಸ್ತಿಗಳು.

ಶಾಸ್ತ್ರೀಯ ಸಂಗೀತ ಲಯವಾದ್ಯ ಕ್ಷೇತ್ರದಲ್ಲಿ ಅವಿರತ ವಾಗಿ ಹುಮ್ಮಸ್ಸಿನಿಂದ ತಮ್ಮ ಸೇವಾ ಕಾರ್ಯ ನಿರ್ವಹಿಸುತ್ತಿರುವ ಶ್ರೀಯುತರ ಪತ್ನಿ ವಿಜಯಲತಾ (ವೀಣಾ ವಾದಕಿ ಹಾಗೂ ಸಂಗೀತದಲ್ಲಿ ಪರಿಶ್ರಮ ಹೊಂದಿರುತ್ತಾರೆ.) ರವರೊಂದಿಗೆ ಮಂಡ್ಯದಲ್ಲಿ ವಾಸಿಸುತ್ತಿದ್ದಾರೆ. ಅಕ್ಕ ಶ್ರೀಮತಿ ಅಮೃತ ಕೂಡಾ ಉತ್ತಮ ಗಾಯಕಿ. ಬೃಹಚ್ಚರಣ ಸಮುದಾಯಕ್ಕೆ ಇವರು ಒಂದು ರೀತಿಯ ಕಿರೀಟಪ್ರಾಯರಾಗಿದ್ದಾರೆ.

ನಮ್ಮ ಸಮುದಾಯದವರು ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ನಡೆಸಿಕೊಡುವ ಶಂಕರ ಜಯಂತಿ ಸಂಗೀತ ಕಾರ್ಯಕ್ರಮದಲ್ಲಿ ಸ್ವಯಂಪ್ರೇರಿತ ರಾಗಿ ಮಂಡ್ಯದಿಂದ ಆಗಮಿಸಿ ಮೃದಂಗ ಪಕ್ಕವಾದ್ಯ ನುಡಿಸಿ ಎಲ್ಲರ ಗೌರವಕ್ಕೆ ಪಾತ್ರರಾದರು.

ಸಂಘದ ಸದಸ್ಯರಾಗಿರುವ ಶ್ರೀ ಎಸ್. ಸುದರ್ಶನ್ ಅವರಂತಹ ಬಹುಮುಖ ಪ್ರತಿಭೆಯ ವ್ಯಕ್ತಿಯನ್ನು "ಬೃಹಚ್ಚರಣ" ಪತ್ರಿಕೆಯ ಮೂಲಕ ಪರಿಚಯ ಮಾಡಿಕೊಡುವ ಸೌಭಾಗ್ಯ ನಮಗೆ ದೊರಕಿದೆ.


◆ ಆರ್.ರಮೇಶ್
**9886034048**




# ವಿದ್ವಾನ್ ಸುದರ್ಶನ್ ಸುಬ್ಬರಾವ್




















# ನಾಗಾರಾಧನಾ ಛಾಯಾಚಿತ್ರಗಳು

ಚಿತ್ರಗಳು :
ಎನ್. ಶಿವಕುಮಾರ್










# ನಾಗಾರಾಧನಾ ಛಾಯಾಚಿತ್ರಗಳು





















# ನಾಗಾರಾಧನಾ ಛಾಯಾಚಿತ್ರಗಳು



















# ಸಂಘದ ಅನ್ನ ಸಂತರ್ಪಣಾ ನಿಧಿಗೆ ದೇಣಿಗೆ ನೀಡಿದ ದಾನಿಗಳು

| | |
|---|---|
| ವಿ. ನರೇಂದ್ರ | 4500 |
| ಶಿವಕುಮಾರ್ | 100 |
| ಅರ್ಜುನ್ ದೇಶಪಾಂಡೆ | 100 |
| ಆರ್.ಎನ್. ಸ್ವಾಮಿನಾಥನ್ | 500 |
| ಎಸ್.ಎಲ್. ಬಾಲಸುಬ್ರಹ್ಮಣ್ಯ | 501 |
| ಎ.ವಿ. ವಿಶ್ವನಾಥ್ | 1500 |
| ಕೆ.ಜಿ. ಶ್ರೀನಿವಾಸ್ | 500 |
| ಕೆ.ಜಿ. ಸೇತುರಾಮ್ | 1500 |
| ಶಿವರಾಮ್ ಚಂದ್ರ | 261 |
| ಆರ್.ಎ. ಶ್ರೀಕಾಂತ್ | 500 |
| ಆರ್.ಎ. ಶ್ಯಾಮ್ ಸುಂದರ್ | 500 |
| ಆರ್.ಪಿ. ರವಿಶಂಕರ್ | 500 |
| ಕಾರ್ತಿಕ್ ಮತ್ತು ಕೌಶಿಕ್ | 1000 |
| ಕೆ.ಆರ್. ಲಕ್ಷ್ಮೀನಾರಾಯಣ್ | 1500 |
| ಸಾವಿತ್ರಮ್ಮ | 1500 |
| ಉಮಾ ಜಯರಾಮ್ | 2000 |
| ಕೃಷ್ಣಸ್ವಾಮಿ ಛಾಯಾಪತಿ | 500 |
| ಎಸ್. ಶ್ರೀನಿವಾಸನ್ | 1000 |
| ಪಾರ್ವತಿ | 500 |
| ಶಾಂತಾ | 500 |
| ಜಿ.ಎಸ್. ಸುಧಾ | 500 |
| ಪಂಕಜ | 500 |
| ರುಕ್ಮಿಣಿ | 500 |
| ಜಿ.ಎಸ್. ವೆಂಕಟೇಶ್ | 510 |
| ದಾನಪ್ಪ ಮತ್ತು ಅಮ್ಮಯಮ್ಮ | 2000 |
| ವಿ. ನರಸಿಂಹ | 2000 |
| ಕೆ. ರಮೇಶ್ ರಾವ್ | 1000 |
| ಲೇಟ್ ಪದ್ಮಾವತಿ, ಸಣ್ಣೆ ಕುಟುಂಬ | 5000 |
| ಟಿ.ಜೆ. ರಘುರಾಮ್ | 1000 |
| ವೇಣುಗೋಪಾಲ್ | 100 |
| ರವಿಪ್ರಕಾಶ್ | 100 |
| ಮಂಜುನಾಥ್ | 100 |
| ಬಿ.ಎಸ್. ಸೂರ್ಯನಾರಾಯಣ್ | 1500 |
| ಎಸ್. ಶ್ರೀನಿವಾಸಯ್ಯ | 100 |
| ಮುರಳಿ ಅನಂತರಾಮ್ | 500 |
| ಎ.ವಿ. ಮಂಜುನಾಥ್ | 1000 |
| ಆರ್.ಎಸ್. ಅರವಿಂದ್ | 501 |
| ಜಿ.ಎಸ್. ರಾಮಯ್ಯರ್ | 100 |
| ಜಿ.ಎಸ್. ಸುಂದರೇಶ್ | 101 |
| ಜಿ.ಎಸ್. ನಾಗರಾಜ್ | 501 |

| | |
|---|---|
| ಪ್ರದೀಪ್ ಸತ್ಯನಾರಾಯಣ್ | 1500 |
| ವೆಂಕಟಸುಬ್ಬಯ್ಯ | 500 |
| ಎಸ್. ರಂಗನಾಥ್ | 500 |
| ರಾಮನರಸಿಂಹ ರಾವ್ | 100 |
| ಎ.ವಿ. ಶ್ರೀನಿವಾಸ್ | 200 |
| ಗಣೇಶ್ ಶ್ರೀಧರ್ | 500 |
| ಸಮ್ಮಿತ್ ಶಶಿಧರ್ | 200 |
| ಹೆಚ್. ವೆಂಕಟೇಶ್ | 1000 |
| ಯುಧಿಷ್ಠಿರ | 501 |
| ಜಿ. ರಾಮಕೃಷ್ಣ | 250 |
| ಸುಮಾ ಗೋಪಾಲ್ | 1000 |
| ಸರಸ್ವತಿ | 1001 |
| ಜಿ.ಎಸ್. ರತ್ನಾ ಸತ್ಯಮೂರ್ತಿ | 1000 |
| ಇಂದಿರಾ ಕೃಷ್ಣಮೂರ್ತಿ | 500 |
| ಟಿ.ಎಸ್. ಕೃಷ್ಣನ್ | 2000 |
| ಟಿ.ವಿ.ಎಸ್. ಶರ್ಮ | 250 |
| ಶಾಂತಾ ವೆಂಕಟೇಶ್ | 250 |
| ಪ್ರಭಾ ನಾಗರಾಜ್ | 500 |
| ಹೆಚ್.ಜಿ. ಅನಂತ್ | 1500 |
| ಕೆ.ಆರ್. ಗಿರಿ | 300 |
| ಅಂಬಾ ನಡವತ್ತಿ | 1001 |
| ಎನ್.ವಿ. ಸುಂದರ್ | 501 |
| ಚಂದ್ರಮೌಳಿ ನಡವತ್ತಿ | 101 |
| ತ್ರಿವೇಣಿ | 500 |
| ಬಿ.ಎ. ಸೂರ್ಯಪ್ರಕಾಶ್ | 1000 |
| ಎಸ್. ರವಿಶಂಕರ್ | 1000 |
| ಗಾಯತ್ರಿ ದೇವಿ ಸಾಯಿನಾಥ್ | 1000 |
| ಉಮಾ ಜಗದೀಶ್ | 1000 |
| ವಿಶ್ವಾಸ್ ರಾಜಾಪುರ್ | 200 |
| ಎಮ್.ಆರ್. ಜಯರಾಮ್ | 1500 |
| ಇಂದಿರಮ್ಮ | 500 |
| ಲಲಿತಾ ಮೂರ್ತಿ | 200 |
| ಕೃಷ್ಣಮೂರ್ತಿ | 1000 |
| ಟಿ.ಪಿ. ಸೂರ್ಯನಾರಾಯಣ್ | 300 |
| ಕೆ.ಟಿ. ನಾಗರಾಜ್ | 2001 |
| ಜಿ.ಎಸ್. ಪದ್ಮನಾಭಯ್ಯ | 2000 |
| ವಸಂತಿ, ಅಶೋಕ್‌ಕುಮಾರ್ | 1100 |
| ಸ್ವಾಮಿನಾಥ್ | 1100 |
| ಟಿ.ಎಸ್. ಚಂಪಕ್ | 300 |
| ಸರ್ಜಾಪುರ್ ಶ್ರೀನಿವಾಸನ್ | 100 |

| | |
|---|---|
| ಅನಂತ್ | 101 |
| ಕಾವ್ಯ ವಿಕ್ರಮ್ | 500 |
| ನವ್ಯ ಹರ್ಷ | 500 |
| ಭಾಗ್ಯ ಕುಮಾರ್ | 500 |
| ಸರಸ ಮತ್ತು ಮಮತಾ | 300 |
| ರಾಹುಲ್ ಶ್ರೀನಿವಾಸ್ ಮತ್ತು ಧಾತ್ರಿ | 1001 |
| ವಿಶಾಖ್ | 101 |
| ರಾಹುಲ್ ಹರಳಿಕಟ್ಟೆ | 3000 |
| ಬಿ.ಸಿ. ಹರ್ಷಿತಾ | 101 |
| ಮೋಹನ್ ರಾವ್ | 101 |
| ಬಿ.ಕೆ. ಸುಬ್ಬಲಕ್ಷ್ಮಿ | 2000 |
| ಎನ್. ಶಶಿಕಲಾ | 500 |
| ಆರ್. ವಸುಂಧರಾ | 500 |
| ಗಿರಿಜಾ ದೇವಿ | 1500 |
| ಯಶಸ್ವಿನಿ | 700 |
| ನಾಗರಾಜು ಕುಟುಂಬ | 100 |
| ಅಶ್ವಥ್ ರಾಜಾರಾವ್ | 501 |
| ಮುರಳೀಧರ | 100 |
| ನಾರಾಯಣಮೂರ್ತಿ | 1000 |
| ಎಮ್. ಅಂಜನ್ ಕುಮಾರ್ | 1500 |
| ಎಸ್. ಶಂಕರ್ | 1000 |
| ಕೆ.ಎಸ್. ಶ್ರೀನಿವಾಸನ್ | 1000 |
| ಎಲ್. ಶ್ರೀನಾಥ್ | 500 |
| ಕರ್ನಲ್ ವಿ.ಜಿ. ರಾಜನ್ | 500 |
| ರಾಜಮ್ಮ | 500 |
| ಮಾತಂಗ್ | 500 |
| ಕೆ.ಜಿ. ಸುಂದರ್ | 500 |
| ಎಲ್. ವೆಂಕಟೇಶ್ | 1000 |
| ವೈ.ಆರ್. ಗಣಪತಿ | 500 |
| ಕಿರಣ್ ಪಾರ್ಥಸಾರಥಿ | 1001 |
| ಸಿ.ಕೆ. ಶಂಕರ್ | 500 |
| ಯೋಗೀಶ್ ಈಶ್ವರಮೂರ್ತಿ | 500 |
| ಕೆ.ಎಸ್. ಶಿವಕುಮಾರ್ | 2001 |
| ಪಾರ್ವತಮ್ಮ ಗುರುಮೂರ್ತಿ | 501 |
| ನಾಗರತ್ನ ಶ್ರೀಧರ್ | 501 |
| ಚಂದ್ರಿಕಾ | 501 |
| ದೀಪಿಕಾ ರಾಜೇಶ್ | 201 |
| ವೀಣಾ ವೆಂಕಟೇಶ್ | 201 |
| ಗಾಯತ್ರಿ ಸತ್ಯನಾರಾಯಣನ್ | 101 |

**ಎಸ್. ಸತ್ಯನಾರಾಯಣ**
ಖಂಜಾಚಿ

**ಟಿ.ಪಿ. ಸೂರ್ಯನಾರಾಯಣ**
ಸಹ ಖಂಜಾಚಿ

**ಆರ್. ಗಣೇಶ್ ಶ್ರೀಧರ್**
ಕಾರ್ಯಕಾರಿ ಸಮಿತಿ ಸದಸ್ಯ

## ಸಂಘಕ್ಕೆ ವಾರ್ಷಿಕ ದೇಣಿಗೆ 500 ರೂ. ನೀಡಿದ ಸಂಘದ ಸದಸ್ಯರು

ಶ್ರೀಯುತರು

ವಿ. ನರೇಂದ್ರ
ಕೆ. ಚಂದ್ರಶೇಖರ್
ಕೆ. ವಿಜಯಲಕ್ಷ್ಮಿ
ತಾರಾ ರವೀಂದ್ರ
ಎಸ್.ಆರ್. ಲತಾ
ಎಮ್.ಆರ್. ವಿಶ್ವೇಶ್
ಎ.ಆರ್. ಸುಬ್ಬರಾವ್
ವೆಂಕಟಸುಬ್ಬರಾವ್
ಆರ್.ಕೆ. ನಾಗಲಕ್ಷ್ಮಿ
ಎಸ್.ಎಸ್. ಪ್ರಸಾದ್
ಕೆ.ಸಿ. ನಟರಾಜ್
ಸರಸ್ವತೀ ನಟರಾಜ್
ಎನ್. ಶಿವಕುಮಾರ್
ಮಮತಾ ಶಿವಕುಮಾರ್
ಶುಭಾ ಗಾಯತ್ರಿ
ಕೆ.ಸಿ. ಜಯರಾಮ್
ಎಸ್. ನಾಗೇಶ್
ಆರ್.ಎನ್. ಸ್ವಾಮಿನಾಥನ್
ಎಸ್.ಆರ್. ಬಾಲಸುಬ್ರಹ್ಮಣ್ಯಮ್
ಶುಭಾ ಛಾಯಪತಿ, ಮೈಸೂರು
ಎ.ವಿ. ವಿಶ್ವನಾಥ್
ಕೆ.ಜಿ. ಶ್ರೀನಿವಾಸ
ಕೆ. ರಾಜಣ್ಣ

ಎಸ್. ಬಾಲಸುಬ್ರಮಣಿ
ಕೆ.ಜಿ. ಸೇತುರಾಮ್
ಗೌರಮ್ಮ ಕೆ. ಚಂದ್ರಶೇಖರ್
ಆರ್.ಪಿ. ರವಿಶಂಕರ್
ಎ. ವೆಂಕಟೇಶ್, ಆನೇಕಲ್
ಉಮಾ ಗೋವಿಂದ
ಕೆ.ಆರ್. ಲಕ್ಷ್ಮೀನಾರಾಯಣ್
ಕೆ.ಆರ್. ರಮಾದೇವಿ
ಎ.ಆರ್. ರವೀಂದ್ರ ಶರ್ಮ
ಎಸ್.ಜಿ. ರಾಜೇಶ್ವರಿ
ಕೃಷ್ಣಸ್ವಾಮಿ ಛಾಯಪತಿ
ಉಮಾ ಜಯರಾಮ್
ಎಸ್. ಶ್ರೀನಿವಾಸನ್
ಆರ್.ಎಸ್. ಮಹೇಶ್
ಡಿ. ಸತ್ಯಮೂರ್ತಿ
ಡಿ. ವಿಶ್ವೇಶ್ವರನ್
ಬಿ. ಶ್ರೀಧರ್
ಎಸ್. ಪ್ರದೀಪ್
ವಿ. ನರಸಿಂಹ
ಆರ್. ವೆಂಕಟೇಶ್ ಪ್ರಸಾದ್
ಪದ್ಮಾ ಜಗನ್ನಾಥ್
ಟಿ.ಪಿ. ಜಗನಾಥ್
ಮುರಳಿ ಅನಂತರಾಮ್
ಆರ್.ಎಸ್. ರವಿಶಂಕರ್

ಎಸ್. ಕೃಷ್ಣ
ಎಸ್. ವಿಜಯದೇವ್
ಪ್ರದೀಪ್ ಸತ್ಯನಾರಾಯಣ್
ವೆಂಕಟ ಸುಬ್ಬಯ್ಯ
ಹೆಚ್. ವೆಂಕಟೇಶ್
ಕೆ. ಮಂಜುನಾಥ್
ಸುಮಾ ಗೋಪಾಲ್
ಇಂದಿರಾ ಕೃಷ್ಣಮೂರ್ತಿ
ಎಮ್.ಆರ್. ಸತ್ಯನಾರಾಯಣ್
ಹೆಚ್.ಜಿ. ಅನಂತ್
ಆರ್. ಗೋಪಾಲಕೃಷ್ಣ
ಎಸ್.ಸಿ. ಪರಿಮಳ
ಸುಮನ್ ಜಿ. ಕೃಷ್ಣ
ಎನ್.ವಿ. ಸುಂದರ್
ಎನ್.ವಿ. ಸೂರ್ಯಪ್ರಕಾಶ್
ಬಿ.ಎ. ಸೂರ್ಯಪ್ರಕಾಶ್
ಬಿ.ಎಸ್. ಸತೀಶ್
ಬಿ.ಎ. ಲಕ್ಷ್ಮಣ ಶರ್ಮ
ಎಸ್. ರವಿಶಂಕರ್
ಗಾಯತ್ರಿ ದೇವಿ ಸಾಯಿನಾಥ್
ಡಾ|| ಶಶಿಕುಮಾರ್
ಎಸ್. ವೈದ್ಯನಾಥ್
ಎಮ್.ಆರ್. ಜಯರಾಮ್

ವೀಣಾ ಅರವಿಂದ್
ಎಮ್.ಎಸ್. ರಮೇಶ್
ಇಂದಿರಮ್ಮ
ಟಿ.ಎಸ್. ಚಂಪಕ್
ಆರ್.ಎಸ್. ಭಗವಾನ್
ಆರ್.ಎನ್. ಕುಮಾರ್
ಆಶಾ ಕುಮಾರ್
ಬಿ.ಇ. ಸಂಧ್ಯಾ
ಎನ್. ವಿಶ್ವನಾಥ್
ಗಿರಿಜಾ ದೇವಿ
ಎಮ್. ಅಂಜನ್ ಕುಮಾರ್
ಕೆ.ಎಸ್. ನಾರಾಯಣ ಸ್ವಾಮಿ
ಕರ್ನಲ್ ವಿ.ಜಿ. ರಾಜನ್
ಎಸ್. ವಿಶ್ವನಾಥ್
ಕೆ. ಹನುಮಂತ್
ಎಲ್. ವೆಂಕಟೇಶ್
ವೈ.ಆರ್. ಗಣಪತಿ
ಆರ್.ಎ. ನಾರಾಯಣ ರಾವ್
ಸಿ.ಕೆ. ಶಂಕರ್
ಎ. ಈಶ್ವರನ್
ಆರ್.ಎ. ನಾರಾಯಣ ರಾವ್
ಟಿ.ಎಲ್. ರಾಮಚಂದ್ರನ್

ಸಂಘಕ್ಕೆ ದೇಣಿಗೆ
ಎಸ್. ರವಿಕುಮಾರ್ **5001/–**




ನಮ್ಮ ಸಮುದಾಯದ ಹಿರಿಯರಾದ, ರೈತ ಬಾಂಧವರಾಗಿದ್ದ ಕಿ. ಶೇ. ಎಸ್. ರಾಮೇಶ್ವರಯ್ಯನವರ ಶ್ಥಳಿಯನ್ನು ಸರ್ಜಾಪುರದ ಎಸ್.ವಿ.ಪಿ. ವಿದ್ಯಾಸಂಸ್ಥೆಯಲ್ಲಿ ಪ್ರತಿಷ್ಠಾಪಿಸಿರುವದು ನಮಗೆಲ್ಲ ಹೆಮ್ಮೆ

## ನಮ್ಮ ಪತ್ರಿಕೆ

ಬೃಹಚ್ಚರಣ ಪತ್ರಿಕೆಮು । ಬೃದಹಾಸೇಲಿ ಬೇಡಿಕೆ ॥
ಬೃಹದ್ವಿಚಾರ ಸಂಚಿಕೆ । ಬೃಹದ್ವಿಚಾರ ಕೋರಿಕೆ ॥

ಮೂರು ತಿಂಗಳಿಗೊಮ್ಮೆ ಬಂದು ।
ಊರು ವಿಷಯವೆಲ್ಲ ತಂದು ।
ಸಾರುತಿಹುದು ಹರುಷದಿಂದ ।
ಮೀರಿ ನಡೆಯಲಿ ಎಂದೆಂದೂ ॥

## ಸುಬ್ರಮಣ್ಯ

ಶ್ರೀ ಸುಬ್ರಮಣ್ಯ ದಯದಿಂದ ।
ಸುವಿಚಾರಗಳು ಐ ತಂದು ।
ಸೋದರರೆಲ್ಲಾ ಸೇರಿ ನಾಗಾರಾಧನೆಗೆ ಮುಂದು ।
ಎಲ್ಲದಕ್ಕೂ ಸೋದರಿಯರ ಸಹಕಾರ ಎಂದೆಂದೂ ॥



◆ ಭ್ರಮರಾ ಗೋಪಿನಾಥ್
6366701153

ಡಿವಿಜಿ ಜನ್ಮದಿನದ ಸವಿನೆನಪಿನಲ್ಲಿ ವಿಶೇಷ ಲೇಖನ

# ಕಸದಿಂದ ರಸ



ಡಿವಿಜಿಯವರ "ಜ್ಞಾಪಕ ಚಿತ್ರ ಶಾಲೆ" ಎಂಟು ಸಂಪುಟಗಳ ಕೃತಿ. ಇವುಗಳ ಪೈಕಿ ಸಂಪುಟದ ಐದನೆಯ ಭಾಗ "ವೈದಿಕ ಧರ್ಮ ಸಂಪ್ರದಾಯಸ್ಥರು".

ಇದರಲ್ಲಿ ಬರುವ ಹಲವು ಧರ್ಮನಿಷ್ಠ ಸಂಪ್ರದಾಯಸ್ಥ ವ್ಯಕ್ತಿ ಪರಿಚಯದ ಪಾತ್ರಗಳಲ್ಲಿ ಒಂದಾದ ಶ್ರೀನಿವಾಸಪುರದ ಚಂದ್ರಶೇಖರ ಶಾಸ್ತ್ರಿಯವರು. ಶಾಸ್ತ್ರಿಗಳ ಪರಿಚಯದ ಬಗ್ಗೆ ಓದಿದ ಮೇಲೆ ನನ್ನ ಆಲೋಚನೆಯಂತೆ ಆ ಬಗ್ಗೆ ನಾಲ್ಕು ಸಾಲುಗಳನ್ನು ಬರೆದು ತಮ್ಮೊಂದಿಗೆ ಹಂಚಿಕೊಳ್ಳುವ ಪ್ರಯತ್ನ. ಕಾರಣ ಇಷ್ಟೇ, ನಾವು ಅನೇಕ ವೇಳೆ ಕೆಲವು ಸಣ್ಣ ಪುಟ್ಟ ವಸ್ತುಗಳು, ಪದಾರ್ಥಗಳನ್ನು ಹೇಗೆಲ್ಲಾ ಅಸಡ್ಡೆಯಿಂದ ಅನಾವಶ್ಯಕವಾಗಿ ಕಸದ ತೊಟ್ಟಿಗಳಲ್ಲಿ ತುಂಬಿಸುತ್ತೇವೆ, ಬದಲಾಗಿ, ಅವುಗಳನ್ನು ಹೇಗೆ ಮರುಬಳಕೆ ಮಾಡಬಹುದು ಎಂಬುದರ ಒಂದು ಸಣ್ಣ ನಿದರ್ಶನ.

ಡಿವಿಜಿಯವರು ಓದುತ್ತಿದ್ದ ಮುಳುಬಾಗಿಲು ಶಾಲೆಗೆ ಮುಖ್ಯೋಪಾಧ್ಯಾಯರಾಗಿ ವರ್ಗಾವಣೆಗೊಂಡು ಬಂದವರು ಶ್ರೀನಿವಾಸಪುರದ ಚಂದ್ರಶೇಖರ ಶಾಸ್ತ್ರಿಗಳು. ಶಾಸ್ತ್ರಿಯವರು ವೇದಾಧ್ಯಯನ ಪಂಡಿತರ ಮನೆತನದವರು. ಅವರ ಮುಖದಲ್ಲಿನ ತೇಜಸ್ಸು ಕಂಡೊಡನೆ ಯಾರಿಗಾದರೂ ಸರಿ ಗೌರವದಿಂದ ನಮಸ್ಕರಿಸಬೇಕು ಎನಿಸುವಂತಹ ಆಕರ್ಷಕ ವ್ಯಕ್ತಿತ್ವ. ವ್ಯಕ್ತಿತ್ವಕ್ಕೆ ತಕ್ಕಂತೆ ಅವರ ಕಂಠವೂ ಅವರಿಗೆ ವರದಾನವಾಗಿತ್ತು, ಆದರೆ ಸ್ವಲ್ಪ ಮುಂಗೋಪವೂ ಹೆಚ್ಚು. ಶಾಲೆಯಲ್ಲಿ ಶಾಸ್ತ್ರಿಗಳ ಕೈಯಲ್ಲಿ ಸದಾಕಾಲವೂ 'ರೂಲ್ಕೋಲು' ಇರುತ್ತಿತ್ತು. ಶಾಸ್ತ್ರಿಗಳನ್ನು ಕಂಡರೆ ಶಾಲೆಯ ಮಕ್ಕಳಿಗೆ ರೂಲರ್ ಕೋಲಿನ ಭಯವಿದ್ದರೂ, ಅವರ ಪಾಠ, ಪ್ರವಚನಗಳ ಶೈಲಿಯು ಮಕ್ಕಳಿಗೆ ಅಚ್ಚುಮೆಚ್ಚು. ಶಾಸ್ತ್ರಿಗಳಿಗೆ ಪ್ರತಿಯೊಂದು ವಸ್ತುಗಳ ಮೇಲೂ ಶಿಸ್ತುಬದ್ಧ ಕಾಳಜಿ ಇತ್ತು. ಇದನ್ನು ಗಮನಿಸುತ್ತಿದ್ದ ಡಿವಿಜಿಯವರು, ತಮ್ಮ ಜೀವನದಲ್ಲೂ ಅದನ್ನು ಅಡವಳಿಸಿಕೊಂಡರಂತೆ.

ಶಾಸ್ತ್ರಿಗಳು ಶಾಲೆಯ ಹೆಡ್ ಮಾಸ್ಟರ್ ಆದ ಕಾರಣ, ಪ್ರತಿವರ್ಷ ಮಕ್ಕಳಿಗೆ ಸರ್ಕಾರದಿಂದ ಒದಗಿಸುತ್ತಿದ್ದ ಪಠ್ಯ ಪುಸ್ತಕಗಳನ್ನು, ಸರ್ಕಾರದ ಗೋದಾಮಿನಿಂದ ಶಾಲೆಗೆ ತಂದು ಅವುಗಳನ್ನು ಮಕ್ಕಳಿಗೆ ಮಾರಾಟ ಮಾಡಿ, ಬಂದ ಹಣವನ್ನು ಖಜಾನೆಗೆ ತುಂಬಿಸುವ ಜವಾಬ್ದಾರಿಯೂ ಅವರದಾಗಿತ್ತು. ಈ ಕೆಲಸಕ್ಕಾಗಿ ಅವರಿಗೆ ಸರ್ಕಾರದಿಂದ 'ಸಾದಿಲ್ವಾರು' (contingency) ಖರ್ಚಿಗಾಗಿ ಸ್ವಲ್ಪ ಹಣವೂ ಬರುತ್ತಿತ್ತು. ಸರ್ಕಾರದ ಗೋದಾಮಿನಲ್ಲಿ ಪುಸ್ತಕಗಳನ್ನು ಭಾಂಗಿಗಳಾಗಿ (bundles) ಕಟ್ಟಿಡುತ್ತಿದ್ದರು. ಅವುಗಳನ್ನು ಶಾಲೆಗೆ ತಂದು ಹಂಚುವ ಕೆಲಸವೂ ಸ್ವಲ್ಪ ಶ್ರಮದ ಕೆಲಸವೇ. ಪುಸ್ತಕದ ಭಾಂಗಿಗಳನ್ನು ತರಗತಿಗೆ ತಂದು ಮಕ್ಕಳಿಗೆ ಮಾರಾಟ ಮಾಡುವ ಮೊದಲು, ಪುಸ್ತಕಗಳ ಭಾಂಗಿಗಳಿಗೆ ಕಟ್ಟಿದ್ದ ದಾರವನ್ನು ಚಾಕುವಿಂದಾಗಲಿ, ಕತ್ತರಿಯಿಂದಾಗಲಿ ತತ್ತರಿಸದೆ, ನಿಧಾನವಾಗಿ ದಾರದ ಗಂಟುಗಳನ್ನು ಶ್ರಮದಿಂದ ಬಿಡಿಸಿ, ದಾರವನ್ನು ತಮ್ಮ ಎಡಗೈನ ನಾಲ್ಕು ಬೆರಳು ಗಳಿಗೆ ಸುತ್ತಿ, ದಾರ ಸಿಕ್ಕುಗೊಳ್ಳದಂತೆ ನವಿರಾಗಿ ಗಂಟು ಹಾಕಿ ಮೇಜಿನ ಮೇಲಿಟ್ಟು ನಂತರ ಭಾಂಗಿಗಳ ಮೇಲೆ ಸುತ್ತಿದ್ದ ಕಾಗದವನ್ನು (binding wrapper) ಬಿಡಿಸಿ ಒಪ್ಪ ಓರಣದಿಂದ ಮಡಿಚಿಡುತ್ತಿದ್ದರು. ಇದನ್ನು ನೋಡಿದ ಮಕ್ಕಳು, ಸಹ ಶಿಕ್ಷಕರು, ಶಾಸ್ತ್ರಿಗಳದು ಜಿಪುಣತನ ಎಂದು ಗುಸುಗುಸು ಹಾಸ್ಯ ಮಾಡಿದ್ದುಂಟು. ಇದನ್ನು ಅರಿತ ಶಾಸ್ತ್ರಿಗಳ ಉತ್ತರ!

ಶಾಲೆಗೆ ತಂದ ಎಲ್ಲ ಪುಸ್ತಕಗಳೂ ಮಾರಾಟ ವಾಗುವುದಿಲ್ಲ, ಶಿಲ್ಕು ಉಳಿಯುತ್ತದೆ. ಹಾಗಾಗಿ ಉಳಿದ ಪುಸ್ತಕಗಳನ್ನು ಸರ್ಕಾರಕ್ಕೆ ಹಿಂತಿರುಗಿಸಬೇಕು. ಸರ್ಕಾರದವರು ಕೊಡುವ ಒಂದೆರಡು ರೂಪಾಯಿ ಸಾದಿಲ್ವಾರು ಹಣದಿಂದ ಮತ್ತೆ ದಾರ ಮತ್ತು ಸುತ್ತುವ ಕಾಗದವನ್ನು ಖರೀದಿಸಿ ಅನವಶ್ಯಕ ಖರ್ಚು ಮಾಡಬೇಕಾದ ಕಾರಣದಿಂದ ಅವುಗಳನ್ನು ಜೋಪಾನ ವಾಗಿ ಇಟ್ಟಿರುತ್ತೇನೆ ಎಂಬ ಉತ್ತರ ಬರುತ್ತಿತ್ತು.

ಇಂತಹ ಅನೇಕ ಘಟನೆಗಳು ಅಂದಿನ ದಿನಗಳಲ್ಲಿ ನಮ್ಮ ಹಿರಿಯರಲ್ಲಿ ಕಾಣುವುದು ಸಾಮಾನ್ಯವಾಗಿತ್ತು. ನಾನು ಕಂಡ ಅಂತಹುದೇ ಒಂದು ಘಟನಾವಳಿ.

ನಮ್ಮ ಚಿಕ್ಕ ತಾತ ಕಿತ್ತಿಗಾನಹಳ್ಳಿಯ ಎಸ್. ರಾಮಯ್ಯನವರ ಮನೆಯಲ್ಲಿ ಸಂಪ್ರದಾಯದಂತೆ ಪ್ರತಿದಿನ ಬೆಳಗಿನ ಪೂಜೆಯ ಸಮಯದಲ್ಲಿ ರಾಮಯ್ಯ ನವರ ಪತ್ನಿ ಶಾರದಮ್ಮನವರು ದೇವರಿಗೆ ದೀಪ ಹಚ್ಚಿ ನಂತರ ಊದುಕಡ್ಡಿ (ಅಗರಬತ್ತಿ) ಹಚ್ಚಿ ಅದನ್ನು ತುಳಸಿಯ ಕಟ್ಟೆಯಲ್ಲಿ ಸಿಕ್ಕಿಸಿ ಇಡುತ್ತಿದ್ದರು. ಊದುಕಡ್ಡಿ ಪೂರ್ತಿಯಾಗಿ ಉರಿದ ಮೇಲೆ, ಒಂದೆರಡು ಇಂಚಿನಷ್ಟು ಬಿದಿರಿನ ಕಡ್ಡಿಯ ಕೊನೆಯ ಭಾಗ ತುಳಸಿಯ ಕಟ್ಟೆಯಲ್ಲಿ ಉಳಿಯುತ್ತಿತ್ತು. ಅವುಗಳನ್ನು

ಕೆಲವು ದಿನಗಳಿಗೊಮ್ಮೆ ಒಟ್ಟಾಗಿ ಸಂಗ್ರಹಿಸಿ ಒಂದು ಡಬ್ಬಿಯಲ್ಲಿ ಹಾಕಿಡುತ್ತಿದ್ದರು. ಇದರ ಉಪಯೋಗ ವೇನು ಎಂಬುದು ಆಗ ತಿಳಿದಿರಲಿಲ್ಲ, ಕುತೂಹಲ ಮಾತ್ರ ಇದ್ದೇ ಇತ್ತು.

ಅದೊಂದು ಹಬ್ಬದ ಹಿಂದಿನ ದಿನದ ಸಂಜೆಯಲ್ಲಿ ಅವರ ಮನೆಗೆ ಹೋದಾಗ, ರಾಮಯ್ಯನವರು ಜಗಲಿ ಕಟ್ಟೆಯಲ್ಲಿ ಕುಳಿತು ಮಾವಿನ ಸೊಪ್ಪಿನ ತೋರಣ ಹೊಲೆಯುತ್ತಿದ್ದರು. ಪಕ್ಕದಲ್ಲಿದ್ದ ಡಬ್ಬಿಯಿಂದ ಒಂದೊಂದೇ ಊದುಕಡ್ಡಿಯ ಬಿದಿರಿನ ತುಂಡು ಕಡ್ಡಿಯಿಂದ ಮಾವಿನ ಎಲೆಗಳನ್ನು ಹಚ್ಚುತ್ತಿದ್ದರು. ಇದನ್ನು ನೋಡಿದ ನಂತರ, ತುಳಸಿ ಕಟ್ಟೆಯಿಂದ ಸಂಗ್ರಹಿಸಿ ಇಡುತ್ತಿದ್ದ ಬಿದಿರು ಕಡ್ಡಿಯ ಉಪಯೋಗದ ಗುಟ್ಟು ತಿಳಿಯಿತು. ಸಣ್ಣ ವಸ್ತುವಾದರೂ, ಅವಶ್ಯಕತೆಗೆ ತಕ್ಕಂತೆ ಅವುಗಳನ್ನು ಹೇಗೆ ಉಪಯೋಗಿಸಿ ಕೊಳ್ಳಬಹುದು ಎಂಬುದಕ್ಕೆ ಇದೊಂದು ನಿದರ್ಶನವೇ ಸರಿ. ಪ್ರಾಯಶಃ ಮಾವಿನ ತೋರಣ ಹಚ್ಚಲು ಈ ಬಿದಿರಿನ ತುಂಡು ಕಡ್ಡಿಗಿಂತಲೂ ಪರಿಸರಕ್ಕೆ ಪೂರಕವಾದ ಪರಿಕರ ಮತ್ತೊಂದು ಇಲ್ಲವೇನೋ!

ತೋರಣ ಹಚ್ಚಲು ಇಂದಿನ ದಿನಗಳಲ್ಲಿ 'ಸ್ಟೇಪ್ಲರ್ ಪಿನ್' ಬಳಸುವುದು ಅಭ್ಯಾಸವಾಗಿಬಿಟ್ಟಿದೆ. ಅದು ಪರಿಸರಕ್ಕೆ, ಪ್ರಾಣಿಗಳಿಗೆ ಹಾನಿಕಾರಕ ಎಂಬ ಅರಿವು ನಮಗಿಲ್ಲ ದಿರುವುದು ದುರದೃಷ್ಟಕರ ಸಂಗತಿ. ಯಾವುದೇ ವಸ್ತು, ಪದಾರ್ಥಗಳನ್ನು ಸುಮ್ಮನೆ ಕಸದ ಡಬ್ಬಿಗೆ ಎಸೆಯುವ ಮೊದಲು ಅವುಗಳು ಮರುಬಳಕೆ ಉಪಯುಕ್ತವೇ ಇಲ್ಲವೆ ಎಂದು ಪರಿಶೀಲಿಸುವುದು ಉತ್ತಮ.




◆ ವಿ.ಎಸ್.ಮಣಿ
9845055582



ಕನ್ನಡದ ದಿಗ್ಗಜರು

ಮಕ್ಕಳಿಗಾಗಿ

## ಅಲ್ಪನಿಗೆ ಐಶ್ವರ್ಯ ಬಂದಾಗ.....



ಏಯ್, ಅಲ್ನೋಡ್ರೋ ಮಂಜಣ್ಣನ ಏರೋಪ್ಲೇನ್ ಆಕಾಶದಲ್ಲಿ ಗಿರ್ಗಿಟ್ಲೇ ಹೊಡಿತಾ ಐತೆ. ಅವನು ನಮ್ಮನ್ನೆಲ್ಲಾ ಹಂಗಿಸಿ, ಹಿಯ್ಯಾಳಿಸಿ ಬಲೇ ಜೋರು ಮಾಡ್ತಾ ಇದ್ದ. ಅವರ ಅಪ್ಪನದು ಜಮೀನು ಮಾರಿ ಬಂದ ಕೋಟಿ, ಕೋಟಿ ದುಡ್ನಲ್ಲಿ ಏನೆಲ್ಲಾ ಮಜ ಮಾಡೋಕೆ ಶುರು ಮಾಡ್ದ!... ನಮ್ಮ ಜೊತೆ ಸೇರೋದೇ ಬಿಟ್ ಬಿಟ್ಟಾ. ದುಡ್ಡು ಬಂದಮೇಲೆ ಬಡವರ ಜೊತೆ ಸೇರ್ತಾನಾ...? ನನ್ನ ಹತ್ತಿರಾನೇ ಏರೋಪ್ಲೇನ್ ಇರೋದು ಅಂತ ಜಂಭ ಕೊಚ್ಕೊಳ್ತಾ ಇದ್ದ. ಅದು ಮೊದಲೇ ಡಕಲಾಸಿ ಏರೋಪ್ಲೇನು. ಹೊಸ ವರ್ಷನ ಆಕಾಶ್‌ದಲ್ಲಿ ಹಾರಾಡ್ಕೊಂಡು ಆಚರಣೆ ಮಾಡ್ತೀನಿ ಅಂದಿದ್ದ. ಅಲ್ಲಿ ಏನ್ ತಿಂದ್ನೋ, ಏನ್ ಕುಡಿದನೋ? ಹೆಂಡ ಕುಡಿದು ಅಮಲಿನಲ್ಲಿ ಏರೋಪ್ಲೇನ್‌ನ ಯಾವುದು ಯಾವುದೋ ಸ್ವಿಚ್ ಒತ್ತಿದ ಅಂತ ಕಾಣುತ್ತೆ. ಇವಾಗ್ ನೋಡು ಅವನ್ ಏರೋಪ್ಲೇನ್ ಆಕಾಶ್ದಲ್ಲಿ ಕೆಟ್ಹೋಗಿ ಹೆಂಗೆ ಗಿರ್ಗಿಟ್ಲೆ ಹೊಡೀತಾ ಐತೆ ಅಂತ, ಇನ್ ಸ್ವಲ್ಪ ಹೊತ್ತಲ್ಲಿ ಪಲ್ಟಿ ಹೊಡೆದು ಕೆಳಗೆ ಬೀಳ್ತೈತೆ.

ಆದ್ರೆ, ನನ್ ಗುಡುಬಂಡಿ ನೋಡು, ಕೆಳಗೆ ಬೀಳೋಹಂಗೇ ಇಲ್ಲ, ನಾನು ಓಡಿಸೋದೇ ನೆಲದ ಮೇಲೆ ತಾನೇ? ಅಮ್ಮಮ್ಮ ಅಂದ್ರೆ ಒಂದು ಚಕ್ರ ಮುರೀಬೋದು ಅಷ್ಟೇ ತಾನೆ? ಇನ್ನೇನು ಆಗೋಕಿಲ್ಲ. ಅಣ್ಣಾ ಅವರ್ ಪಿಕ್ಚರ್‌ನಲ್ಲಿ ಹಾಡು ಹೇಳೋಲ್ವಾ, ಕೋಟೆ ಕಟ್ಟಿ ಮೆರೆದೋರೆಲ್ಲಾ ಏನಾದ್ರು....! ಹಂಗೇನೇ, ಶಾನೇ ಮೆರದೋರ ಗತಿ ಇಂಗೇ ಆಗೋದು. ಅದಕ್ಕೆ ಗಾದೆ ಮಾತು ಹೇಳೋದು, ಅಲ್ಪನಿಗೆ ಐಶ್ವರ್ಯ ಬಂದಾಗ ಅರ್ಧರಾತ್ರೀಲಿ ಕೊಡೆ ಹಿಡಿದರಂತೆ. ಹಂಗೆಲ್ಲಾ ಆಡೋದು ಬಿಟ್ಟು ತಗ್ಗಿಬಗ್ಗಿ ನಡೀಬೇಕು. ಆವಾಗ ಒಳ್ಳೇದಾಗ್ತೈತೆ, ಅಲ್ವೇನ್ರೋ...!

◆ ವಿ.ಎಸ್.ಎಂ.

## ಶುಭ ವಿವಾಹ

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಬಿ.ಎನ್.ಜಿ. ಪ್ರಸಾದ್ ಹಾಗೂ ಶ್ರೀಮತಿ ಇಂದಿರಾ ಪ್ರಸಾದ್‌ರವರ ಪುತ್ರ ಸಂಘದ ಸದಸ್ಯ **ಚಿ॥ ಬಿ.ಜಿ. ಶ್ರೀರಾಮ್**‌ರವರ ವಿವಾಹವು ಶ್ರೀ ಸುದೀಪ್ ಕುಮಾರ್ ಮತ್ತು ಶ್ರೀಮತಿ ಜಯಶ್ರೀ ಸುದೀಪ್‌ರವರ ಪುತ್ರಿ **ಚಿ॥ ಕೆ.ಎಸ್. ಶ್ರೇಯಾ**ರವರೊಂದಿಗೆ ದಿನಾಂಕ 29–03–2020ರಂದು ಬೆಂಗಳೂರಿನಲ್ಲಿ ನೆರವೇರಿತು.

***ನೂತನ ದಂಪತಿಗಳಿಗೆ ಸಂಘವು ಶುಭ ಹಾರೈಸುತ್ತದೆ.***

## ಜನನ

ಸಂಘದ ಸದಸ್ಯ ಶ್ರೀ ಭಾಸ್ಕರ್ ಮತ್ತು ಶ್ರೀಮತಿ ನಾಗವೇಣಿ ಅವರ ಪುತ್ರ ಶ್ರೀ ನಕುಲ್, (ಸಂಘದ ಕಾರ್ಯಕಾರಿ ಸದಸ್ಯ ಶ್ರೀ ನಿತಿನ್‌ಭಾಸ್ಕರ್‌ರವರ ಸೋದರ) ಶ್ರೀಮತಿ ಶ್ವೇತಾ ದಂಪತಿಗಳಿಗೆ ದಿನಾಂಕ 15–1–2020ರಂದು ಹೆಣ್ಣುಮಗು ಜನನವಾಗಿದೆ.

*

ಸಂಘದ ಮಹಾ ಪೋಷಕರಾದ ಶ್ರೀ ಕೆ. ಶ್ರೀಕಂಠೇಶ್ವರ ಅವರ ಪುತ್ರ ಮತ್ತು ಸಂಘದ ಸದಸ್ಯರಾದ ಡಾ. ಪ್ರವೀಣ್ ಮತ್ತು ಡಾ. ಕಲ್ಪನಾ ದಂಪತಿಗಳಿಗೆ ದಿನಾಂಕ: 02–01–2020ರಂದು ಅವಳಿ ಹೆಣ್ಣುಮಕ್ಕಳ ಜನನವಾಗಿದೆ.

***ಸಂಘವು ನವಜಾತ ಶಿಶುಗಳಿಗೆ ಶುಭ ಕೋರುತ್ತದೆ.***

## ಸಂಘಕ್ಕೆ ಹೊಸ ಸದಸ್ಯರು

**ಲಯ ವಿದ್ವಾನ್ ಎಸ್. ಸುದರ್ಶನ್**
**ಶ್ರೀಮತಿ ಸುಹಾಸಿನಿ ಅಜಯ್**
**ಶ್ರೀಮತಿ ಶುಭಾ ಛಾಯಾಪತಿ, ಮೈಸೂರು**



**ಆತ್ರೇಯ ರಘುನಂದನ್**

ಶ್ರದ್ಧಾಂಜಲಿ

## ನಮ್ಮನ್ನಗಲಿದ ನಮ್ಮವರಿಗೆ ಗೌರವ ನಮನ



* ಸಂಘದ ಸದಸ್ಯ ಶ್ರೀ ಚಂದ್ರಮೌಳಿರವರ ಸೋದರ **ಎನ್. ಶ್ರೀನಿವಾಸ್** (74) ದಿನಾಂಕ 06–01–2020ರಂದು ನಮ್ಮನ್ನಗಲಿದ್ದಾರೆ.

* *

* ಕಿತ್ತಿಗಾನಹಳ್ಳಿ ನಾಗರಕ್ಷೇತ ಹಾಗೂ ಶ್ರೀ ಶ್ರೀನಿವಾಸ ದೇವಸ್ಥಾನದ ಮುಖ್ಯಸ್ಥರಾಗಿದ್ದ ದಿ। ನಂಜುಂಡ ದೀಕ್ಷಿತರ ಪತ್ನಿ **ಜಯಶ್ರೀ** ಅವರು ದಿನಾಂಕ 20–01–2020ರಂದು ನಮ್ಮನ್ನಗಲಿದ್ದಾರೆ.

* *

* ಸಂಘದ ಸದಸ್ಯರಾದ ಶ್ರೀ ಕಲ್ಯಾಣರಾಮನ್ ಚಂದ್ರಶೇಖರ್ ಮತ್ತು ಶೇಷಾದ್ರಿವಾಸು ಅವರ ಸಹೋದರಿ **ಸುಧಾ**ರವರು (56) ದಿನಾಂಕ 06–03–2020ರಂದು ನಮ್ಮನ್ನಗಲಿದ್ದಾರೆ.

* *



ಸಹಕಾರ್ಯದರ್ಶಿ ಶ್ರೀ ಅರುಣ್ ವಿ. ರವರ ಚಿಕ್ಕಮ್ಮ **ಶ್ರೀಮತಿ ಪದ್ಮ**ರವರು (74) ದಿನಾಂಕ 13–4–20ರಂದು ನಮ್ಮನ್ನಗಲಿದ್ದಾರೆ. ಸದಸ್ಯರಾದ ಶ್ರೀಮತಿ ಅನ್ನಪೂರ್ಣಮ್ಮ ವಿ, ಶ್ರೀ ಜಯರಾಂ ಹಾಗೂ ಶ್ರೀ ಶೇಷಾದ್ರಿ ಅವರ ಸೋದರಿ.

* *

ಸಂಘದ ಸದಸ್ಯರಾದ ಶ್ರೀ ಗಣೇಶ್ ರಾಮ್‌ರವರ ತಾಯಿ **ಶ್ರೀಮತಿ ಪಾರ್ವತಮ್ಮ**ನವರು ದಿನಾಂಕ 30–3–20ರಂದು ನಮ್ಮನ್ನಗಲಿದರು.

* *

ಸಂಘದ ಸದಸ್ಯ ಶ್ರೀ ಟಿ.ಎಸ್. ಮಣಿ ಅವರ ಸೋದರತ್ತೆ ಹಾಗೂ ಗುಮ್ಮಳಾಪುರದ ಶ್ರೀ ಸುಂದರಯ್ಯ ಅವರ ಪತ್ನಿ ದಿನಾಂಕ 03–6–20ರಂದು **ಶ್ರೀಮತಿ ಸರಸ್ವತಿ** ಅವರು ಕಿತ್ತಿಗಾನಹಳ್ಳಿಯಲ್ಲಿ ನಿಧನರಾದರು.

* *

ಸಂಘದ ಸದಸ್ಯೆ ಶ್ರೀಮತಿ ಮಮತಾ ಶಿವಕುಮಾರ್‌ರವರ ತಂದೆ **ಸುಂದರರಾಮ ಶಾಸ್ತ್ರಿ**ಯವರು 04–06–2020 ರಂದು ನಮ್ಮನ್ನಗಲಿದ್ದಾರೆ.

* *



**ತಿದ್ದುಪಡಿ** : ದಿನಾಂಕ 18–11–2019ರಂದು ಶತಾಯುಷಿ ಎಸ್.ವಿ. ರಾಮಕೃಷ್ಣರವರು ನಮ್ಮನ್ನ ಗಲಿದ್ದಾರೆ. ಇವರು ಸಂಘದ ಸದಸ್ಯರಾದ ಶ್ರೀ ಬದರಿನಾರಾಯಣ, ಶ್ರೀ ಮಹೇಶ್‌ರವರ ತಾತನವರು.

* *

## ಬುದ್ಧಿಮಾತು

* ಸ್ವಾಧ್ಯಾಯೇ ನಿತ್ಯಯುಕ್ತಸ್ಯಾತ್ ।
**ದಿನವೂ ತನ್ನ ಪಾಠಗಳನ್ನು ಓದುತ್ತಿರಬೇಕು.**
* ಯಶೋಽರ್ಜಯನ್ ಸಾಹಸಂ ಕುರ್ಯಾತ್ ।
**ಕೀರ್ತಿಯನ್ನು ಅರಸುತ್ತಾ ಸಾಹಸ ಗೈಯಬೇಕು**
* ಶಿಕ್ಷಾಂ ರಕ್ಷಿತುಂ ಕಾಮಾತ್ ಚಿತ್ತಂ ರಕ್ಷ್ಯಂ ಪ್ರಯತ್ನತಃ ।
**ವಿದ್ಯೆಯನ್ನೂ ರಕ್ಷಿಸಿಕೊಳ್ಳಬೇಕಾದರೆ ಮನಸ್ಸನ್ನು ಸರಿಯಾಗಿಟ್ಟುಕೊಳ್ಳಬೇಕು.**
* ಅಪ್ರಾಪ್ಯಂ ನಾಮ ನೇಹಾಸ್ತಿ ಧೀರಸ್ಯ ವ್ಯವಸಾಯಿನಃ ।
**ಧೀರನಿಗೆ ಮತ್ತು ಪ್ರಯತ್ನಶೀಲನಿಗೆ ಅಸಾಧ್ಯವಾದುದು ಯಾವುದೂ ಇಲ್ಲ.**
* ಅನಭ್ಯಾಸೇ ವಿಷಂ ವಿದ್ಯಾ ।
**ಅಭ್ಯಾಸ ಮಾಡದಿದ್ದರೆ ವಿದ್ಯೆಯು ವಿಷ**
* ಅನಿರ್ವೇದಃ ಶ್ರೀಯೋ ಮೂಲಮ್ ।
**ಉತ್ಸಾಹವೇ ಸಂಪಾದನೆಗೆ ಮೂಲ.**
* ಆಲಸ್ಯಂ ಹಿ ಮನುಷ್ಯಾನಾಂ ಶರೀರಸ್ಥೋ ಮಹಾನ್‌ರಿಪುಃ
**ಸೋಮಾರಿತನವು ಮನುಷ್ಯ ಶರೀರದಲ್ಲಿರುವ ಮಹಾಶತ್ರು**
* ಬಂಧೂನಾಂ ವಾರಯೇತ್ ವೈರಮ್ ।
**ಬಂಧುಗಳೊಡನೆ ಎಂದೂ ಜಗಳವಾಡಬಾರದು.**
* ಯಥೋಪಾರ್ಜನಂ ವ್ಯಾಯಂ ಕುರು ।
**ಹಾಸಿಗೆ ಇದ್ದಷ್ಟು ಕಾಲು ಚಾಚು.**
* ಅತಿ ಸರ್ವತ್ರ ವರ್ಜಯೇತ್ ।
**ಎಲ್ಲೂ ಅತಿಯಾಗಿ ವರ್ತಿಸಬಾರದು**
* ಆಚಾರಃ ಪರಮೋ ಧರ್ಮಃ ।
**ಸದಾಚಾರವೇ ಪರಮಧರ್ಮ**
* ಕ್ರೋಧೋ ಹಿ ಶತ್ರುಃ ಪರಮೋನರಾಣಾಮ್ ।
**ಕೋಪವೇ ಮನುಷ್ಯನ ಮೊದಲ ಶತ್ರು**
* ಅಕ್ರೋಧೇನ ಜಯೇತ್ ಕ್ರೋಧಂ ಅಸಾಧುಂ ಸಾಧನಾ ಜಯೇತ್ ।
**ಕೋಪವನ್ನು ಶಾಂತಿಯಿಂದಲೂ, ಕೆಟ್ಟದ್ದನ್ನು ಒಳ್ಳೆಯದಿಂದಲೂ ಗೆಲ್ಲಬೇಕು.**
* ಅಪದಾಂ ಕಥಿತಃ ಪಂಥಾಃ ಇಂದ್ರಿಯಾಣಾಃ ಅಸಂಯಮಃ ।
**ಇಂದ್ರಿಯನಿಗ್ರಹವಿಲ್ಲದಿರುವುದೇ ದುಃಖಕ್ಕೆ ಕಾರಣ.**
* ಆತ್ಮೈವಹ್ಯಾತ್ಮನೋ ಬಂಧುಃ ಆತ್ಮೈವರಿಪುರಾತ್ಮನಃ ।
**ಮನುಷ್ಯನಿಗೆ ಅವನ ಮನಸ್ಸೇ ಮಿತ್ರ, ಅವನ ಮನಸ್ಸೇ ಶತ್ರು**
* ಅಪರಿ ಸ್ಫುರತಿ ಪ್ರಜ್ಞಾಯಸ್ಯಾ ಧೀರಃ ಏವಹಿಃ ।
**ಆಪತ್ತಿನಲ್ಲೂ ಧೃತಿಗೆಡದಿರುವವನೇ ಧೀರ**
* ನ ಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ ।
**ಒಳ್ಳೆಯ ಕೆಲಸವನ್ನು ಮಾಡಿದವನಿಗೆ ಎಂದೂ ದುರ್ಗತಿ ಇಲ್ಲ.**
* ನ ಮೇ ಭಕ್ತಃ ಪ್ರಣಶ್ಯತಿ ।
**ಭಕ್ತನಿಗೆ ಎಂದೂ ನಾಶವಿಲ್ಲ**



◆ **ಎನ್. ಶ್ರೀನಿವಾಸಯ್ಯ**
7899318098

## ಚಿಂತನೆ

* ಪೌರೋಹಿತ್ಯವು ವೃತ್ತಿಯಾಗಕೂಡದು ವೃತ್ತಿಯಾದರೆ ಲಾಭ ನಷ್ಟಗಳು ಆರಂಭವಾಗುತ್ತದೆ. ಅದು ಮಾರ್ಗದರ್ಶಕವಾಗಬೇಕು.
* ಸಾತ್ವಿಕತೆ, ನಿಷ್ಠೆ, ತೃಪ್ತಿಯನ್ನು ಯಾರು ತನ್ನ ಜೀವನದಲ್ಲಿ ಅಳವಡಿಸಿಕೊಂಡಿರುತ್ತಾರೋ ಅವರೇ ನಿಜವಾದ ಬ್ರಾಹ್ಮಣರು.
* ದಿನಚರಿಯಲ್ಲಿ ವಿಷಯಗಳನ್ನು ಮಿತಿ ಮೀರಿ ತುಂಬಿಕೊಂಡರೆ ಜೀವನದ ಪ್ರಯಾಣ ಭಾರವಾಗಿ ಹಿಂಸೆ ತರುತ್ತದೆ.
* ಅಗ್ನಿಗೆ ಆಹುತಿಯನ್ನು ಕೊಡುವುದಕ್ಕಿಂತ ಹಗಲು ರಾತ್ರಿ ನಿಮ್ಮ ನಿಮ್ಮ ಅಹಂಕಾರವನ್ನು ಆಹುತಿಯನ್ನಾಗಿ ಕೊಡಿ.
* 'ನಾನು ನನ್ನದು' ಎಂಬ ಭಾವನೆಯೇ ಎಲ್ಲಾ ದುಃಖಕ್ಕೂ ಕಾರಣ.
* ಸೇವಾ ಮನೋಭಾವನೆಯನ್ನು ಎಂದೂ ಮರೆಯಬೇಡಿ.
* ಕರ್ಮ ಮಾಡುವುದೇ ಧರ್ಮವಲ್ಲ. ಆದರೆ ಧಾರ್ಮಿಕವಾಗಿ ಕಾಮನಾರಹಿತವಾಗಿ ಕರ್ಮ ಮಾಡಿದರೆ ಮುಕ್ತಿ ದೊರೆಯುತ್ತದೆ.
* ವಿಚಾರ ಮಾಡಿ ಆಚರಿಸಿದರೆ ಅದು ಆಚಾರ, ಇಲ್ಲದಿದ್ದರೆ ಅದುವೇ ಅನಾಚಾರ.
* ಅತಿ ಆಸೆ ಪಡುವ ಗಂಡಸು, ಅತಿ ಕೋಪಪಡುವ ಹೆಂಗಸು, ಜೀವನದಲ್ಲಿ ಮುಂದೆ ಬರುವುದು ಕಷ್ಟ.

◆ **ಶ್ರೀಮತಿ ಕೆ.ಎಲ್. ಶಾಂತ**
**9620021599**

# ವಾರ್ತಾ ಚಿತ್ರಗಳು......



ಬೃಹಚ್ಚರಣ ಸಂಘದ ಪೋಷಕ ಸದಸ್ಯರಾಗಿರುವ ಶ್ರೀ ಆರ್.ಎಸ್. ರಮೇಶ್ ಅವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಚೀಫ್ ಜನರಲ್ ಮ್ಯಾನೇಜರ್ ಆಗಿ ಬಡ್ತಿ ಹೊಂದಿದ್ದು ಶ್ರೀಯುತರನ್ನು ಬೃಹಚ್ಚರಣ ಸಂಘವು ಅಭಿನಂದಿಸುತ್ತಾ ನೂತನ ಹುದ್ದೆ ನಿರ್ವಹಿಸುವಲ್ಲಿ ಯಶಸ್ಸು ಕೋರುತ್ತದೆ.



ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ.ಜಿ. ವೆಂಕಟೇಶ್ ದಂಪತಿಗಳಿಗೆ 50ನೇ ವಿವಾಹ ಮಹೋತ್ಸವದ ಸಂದರ್ಭದಲ್ಲಿ ಸಂಘದಿಂದ ಶುಭ ಹಾರೈಕೆ

## ನಮ್ಮವರ ಕಲಾಕುಸಮಗಳು




ಸೋನಿಯಾ ಶಿವರಾಂ – 9845024620



ಚಿ॥ ಆತ್ರೇಯ, ಶ್ರೀಮತಿ ಸುಷ್ಮ, ಶ್ರೀ ರಘುನಂದನ್‌ರವರ ಪುತ್ರ







ಚಿ॥ ಸಮಾಹಿತ, ಶ್ರೀಮತಿ ಮಮತ, ಶ್ರೀ ಶಿವಕುಮಾರ್ ಅವರ ಪುತ್ರ

ಚಿ॥ ಶ್ರೀರಾಮ್, ಶ್ರೀಮತಿ ಸುಷ್ಮ, ಶ್ರೀ ಚಂದ್ರಶೇಖರ್ ಅವರ ಪುತ್ರ ಹಾಗೂ ಶ್ರೀ ಟಿ.ಎಸ್. ರಮೇಶನ್ ಅವರ ಮೊಮ್ಮಗ

# ಶ್ರೀ ಕಾಶೀ ವಿಶ್ವನಾಥೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವ

**ದೊಮ್ಮಸಂದ್ರ, ಆನೇಕಲ್ ತಾಲ್ಲೂಕು**

–ಸಂಧ್ಯಾ







ಕಾಶೀ ವಿಶ್ವನಾಥ ದೇವಾಲಯವು ಸುಮಾರು ಇನ್ನೂರು ವರ್ಷಕೂ ಪುರಾತನ ದೇವಾಲಯ. ಈ ದೇವಾಲಯದಲ್ಲಿ ಗಣೇಶ, ಶಿವ ಹಾಗೂ ಪಾರ್ವತಮ್ಮನವರ ವಿಗ್ರಹಗಳಿವೆ. ಶಿವನ ಲಿಂಗವನ್ನು ಕಾಶೀ ಕ್ಷೇತ್ರದಿಂದ ನಮ್ಮ ಸಮುದಾಯದ ಮೃತ್ಯುಂಜಯರಾಯರು ತೆಗೆದುಕೊಂಡು ಬಂದು ಇಲ್ಲಿ ಪ್ರತಿಷ್ಠಾಪನೆ ಮಾಡಿರುತ್ತಾರೆ. ಪ್ರತಿ ವರ್ಷವೂ ಕಾಮನ ಹುಣ್ಣಿಮೆಯಂದು ಬಹಳ ವಿಜೃಂಭಣೆಯಿಂದ ರಥೋತ್ಸವ ನಡೆಯುತ್ತದೆ. ಈ ವರ್ಷವೂ ತಾ. 09.03.2020ರಂದು ಬ್ರಹ್ಮ ರಥೋತ್ಸವ ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು. –ಡಿ.ಎಸ್. ಗೋವಿಂದರಾಜು







*If undelivered please return to :*
*President*
**'Bruhacharana Sangha'**
No. 27/1, Bull Temple Road,
Basavanagudi,
Bengaluru - 560 004.

To,

Book-Post

Published by Sri B. Subramanyam, President, 'BRUHACHARANA SANGHA' No. 27/1, Bull Temple Road, Basavanagudi, Bengaluru - 560 004.
Printed at Keerthi Printers, Omkara, 240-F, 2nd D Cross, 2nd 'B' Main, Girinagar 1st Phase, Bengaluru - 560 085, Ph : 080-26722034